Bennett & Coleman
THE TIMES OF INDIA
ಶನಿವಾರ,23 ಮೇ 2026 | ಪುಟಗಳು: 14+10+4 | ಬೆಲೆ: ₹ 5.00
www.vijaykarnataka.com
C
ಸಂಪುಟ: 27 | ಸಂಚಿಕೆ: 142
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA



ಜಮ್ಮು-ಕಾಶ್ಮೀರ ಗಡಿ ಶಾಲೆಗೆ 1 ಕೋಟಿ ರೂ. ದೇಣಿಗೆ ನೀಡಿದ ನಟ ಅಕ್ಷಯ್ ಕುಮಾರ್

ಭೂತಾನ್ ಶಾಂತತೆಗೆ ಮನಸೋತ ಮೇಘನಾ
»ಲವಲVK ನೋಡಿ

ಇಂದು ಉದ್ಯೋಗ ಮೇಳ, 51 ಸಾವಿರ ನೇಮಕಾತಿ ಪತ್ರಗಳನ್ನು ವಿತರಿಸಲಿರುವ ಪ್ರಧಾನಿ ಮೋದಿ

PRM/KA/RERA/1251/310/PR/200526/008667
WWW.RERA.KARNATAKA.GOV.IN

A "spacious" hall where the sofa and TV adjust for space.

A balcony that's a laundry zone... with a "garden view" by one small plant.

Pakkad mane folks so close... they and their noses live in your business.

Kids adjusting between corridors and car parks for play area.

"Prime location" that's still not connected to everything important.

What if life was less about swalpa adjusting... and a lot more about living?

Bengaluru,
#No more "swalpa adjust maadi"

LAUNCHING CASAGRAND MOONDANCE OFF MYSORE RD.
15 mins from RR Nagar

Spacious 2 & 3 BHK Apartments at an Unbelievable Price from ₹73 L – ₹1.08 Cr*

MARKET PRICE	LAUNCH PRICE	EARLY BIRD PRICE
~~₹7499~~/sft.	~~₹5599~~/sft.	₹5199/sft. (For 50 bookings)

*T & C apply

#NoMoreSwalpaAdjustMaadi

PRM/KA/RERA/1251/310/PR/200526/008667
WWW.RERA.KARNATAKA.GOV.IN

LAUNCHING

CASAGRAND MOONDANCE

OFF MYSORE RD.
15 mins from RR Nagar

Spacious 2 & 3 BHK Apartments starting at an Unbelievable Price from ₹73 L – ₹1.08 Cr*

MARKET PRICE	LAUNCH PRICE	EARLY BIRD PRICE (FOR 50 BOOKINGS)
~~₹7499~~/sft.	~~₹5599~~/sft.	₹5199/sft.

Handover in 30 months

TYPE	SIZE	LAUNCH PRICE	EARLY BIRD PRICE (FOR 50 BOOKINGS)
2 BHK	1171 sft. - 1470 sft.	~~₹77L - ₹92L~~	₹73L - ₹86L
3 BHK	1641 sft. - 1866 sft.	~~₹1.03Cr - ₹1.14Cr~~	₹97L - ₹1.08Cr

Stop adjusting Start living

Community
8.6 acres with just 504 homes, 4.5 acres of open space, & 3 central courtyards across 71,500 sft.

Lifestyle
65+ amenities, a 20,300 sft. grand clubhouse & 100% vehicle-free podium

Planning
100% vaastu-compliant homes with convertible balconies for 3x light & ventilation

Space
12ft wide living & dining spaces, 13ft bedrooms & expansive 8ft windows, largest in the segment

Premium Specifications
Grand main door with digital door lock, premium CP sanitary fittings & more

*T & C apply

65+ World-class Amenities

Outdoor Amenities

FEATURES & ENTERTAINMENT
1. Walking & Jogging Track
2. Cycling Track
3. Senior Citizen Court
4. Reflexology Pathway
5. Aromatic Garden
6. Multi-Purpose Lawn
7. Pets Park With Wash Area
8. Outdoor Board Games **& 8 more**

KIDS
17 Sensory Walk
18. Skating Rink
19. Adventure Play Area
20. Play Mound **& 5 more**

SPORTS, FITNESS & WELLBEING
26. Multipurpose Court
27. Badminton Court
28. Mini-Golf Putting
29. Outdoor Gym **& 4 more**

SWIMMING POOL
34. Adults Pool
35. Kid's Pool
36. Pool Volley Ball
37. Poolside Café
38. Jacuzzi **& 5 more**

Clubhouse Amenities

FEATURES & ENTERTAINMENT
44. Multipurpose Hall with Pantry
45. Minitheatre

INDOOR GAMES
46. Table Tennis
47. Billiard Table
48. Subsoccer
49. Indoor Mini Golf **& 4 more**

FITNESS & WELLBEING
54. Gym
55. Yoga / Aerobics

KIDS PLAY AREA
56. Ball Pool with Slide **& 2 more**

CO-WORKING SPACE
59. Conference Room
60. Co-Working Space
61. Learning Centre

TERRACE
62. Sky Cinema **& 2 more**

CONVENIENCE
65. Ironing Shop
66. Convenio Store **& 3 more**

Connectivity

Mysore Road	5 mins
Challaghatta Metro	6 mins
Rajarajeshwari Hospital	7 mins
Don Bosco Institute	8 mins
NICE Road Junction	10 mins
RV College Belt	15 mins
Global Tech Park	15 mins
Gopalan Arcade Mall	18 mins

Location Map



SCAN FOR LOCATION MAP


SWIMMING POOL

SKY CINEMA

LIVING ROOM

WHY CASAGRAND?

Top 7 ranked in India	**Top 2** ranked in South India	**No.1** ranked in Chennai for last 8 years*	**22+ years** of trust & legacy	**7000+** homes sold (June'24 - May'25)	**6 Cities** - Chennai, Bengaluru, Hyderabad, Pune, Coimbatore & Dubai
2 months guaranteed rental	**6 months** guaranteed resale	**7 years** warranty	**10 years** maintenance by us	**2000+** quality checks	**On-time** delivery of projects

FOR BOOKING CALL: **77956 54059**

CREDAI

Exclusive site visit available. Visit model house at site.

Promoter Address: No. 34/1, 4th Floor Salma Bizhouse Meanee Avenue Road, Halasuru, Karnataka 560 042.

SCAN TO EXPERIENCE THE UN-ADJUSTMENT WAY OF LIFE

CASAGRAND
building aspirations

*Based on CBRE report 2024

Casagrand Premier Builder Limited is proposing, subject to receipt of requisite approvals, market conditions and other considerations, to make an initial public offer of its equity shares and has filed a draft red herring prospectus ("DRHP") with the Securities and Exchange Board of India ("SEBI"). The DRHP is available on the website of our Company, at www.casagrand.co.in, the SEBI at www.sebi.gov.in as well as on the websites of the book running lead managers Motilal Oswal Investment Advisors Limited and DAM Capital Advisors Limited at www.motilaloswalgroup.com and www.dam-capital.in respectively, and the websites of the stock exchange(s) at www.nseindia.com and www.bseindia.com, respectively. Any potential investor should note that investment in equity shares involves a high degree of risk and for details relating to such risk, see "Risk Factors" of the RHP, when available. Potential investors should not rely on the DRHP filed with SEBI for making any investment decision.

The Equity Shares have not been and will not be registered under the U.S. Securities Act of 1933, as amended ("U.S. Securities Act") or any other applicable law of the United States and, unless so registered, may not be offered or sold within the United States except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, the Equity Shares are being offered and sold outside the United States in "offshore transactions" as defined in and in compliance with Regulation S under the U.S. Securities Act and the applicable laws of the jurisdiction where those offers and sales occur.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 142
ಶನಿವಾರ,23 ಮೇ 2026 | ಪುಟಗಳು: 14+10+4 | ಬೆಲೆ: ₹ 5.00
C
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

Bennett & Coleman THE TIMES OF INDIA

ಸಂಪಾದಕೀಯ EDITORIAL

ತನಿಖಾ ಸಂಸ್ಥೆಗಳಿಗೆ ಸುಪ್ರೀಂ ಬ್ರೇಕ್

ಹಕ್ಕುಗಳ ರಕ್ಷಣೆಯೇ ಸಂವಿಧಾನದ ಆಶಯ

ಕಾನೂನು ಎಷ್ಟೇ ಕಠಿಣವಾಗಿರಲಿ, ಆರೋಪಿ ಯಾರೇ ಇರಲಿ, ಪ್ರಜಾಪ್ರಭುತ್ವದ ಮೂಲಭೂತ ತತ್ವವಾದ 'ನ್ಯಾಯಸಮ್ಮತ ವಿಚಾರಣೆಯ ಹಕ್ಕನ್ನು(ರೈಟ್ ಟು ಫೇರ್ ಟ್ರಯಲ್) ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಸುಪ್ರೀಂ ಕೋರ್ಟ್ ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆ (ಪಿಎಂಎಲ್ಎ) ಅಡಿಯಲ್ಲಿ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಸಿಕ್ಕಿರುವ ಅಪಾರ ಅಧಿಕಾರ ಮತ್ತು ಇತ್ತೀಚಿನ ವರ್ಷಗಳಲ್ಲಿ ಅದರ ದುರ್ಬಳಕೆಯಾಗುತ್ತಿರುವ ಆರೋಪಗಳ ಬೆನ್ನಲ್ಲೇ, ನ್ಯಾಯಮೂರ್ತಿಗಳಾದ ಎಂ. ಎಂ. ಸುಂದರೇಶ್ ಮತ್ತು ಎನ್. ಕೆ. ಸಿಂಗ್ ಅವರ ಪೀಠ ನೀಡಿರುವ ತೀರ್ಪು ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸಾಂವಿಧಾನಿಕ ಹಕ್ಕುಗಳ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ.

ಯಾವುದೇ ಒಂದು ಆರ್ಥಿಕ ಅಪರಾಧದ ಪ್ರಕರಣವನ್ನು ವಿಶೇಷ ನ್ಯಾಯಾಲಯವು ಪರಿಗಣನೆಗೆ (Cognisance) ತೆಗೆದುಕೊಳ್ಳುವ ಮುನ್ನ ಆರೋಪಿಯ ವಾದವನ್ನು ಆಲಿಸುವುದು ಕಡ್ಡಾಯ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿರುವುದು, ಏಕಪಕ್ಷೀಯ ತನಿಖೆ ಮತ್ತು ದಬ್ಬಾಳಿಕೆಗೆ ಬಿದ್ದ ದೊಡ್ಡ ಪೆಟ್ಟಾಗಿದೆ. ಪಿಎಂಎಲ್ಎ ಒಂದು ಸ್ವತಂತ್ರ ಕಾಯಿದೆ ಆಗಿರುವುದರಿಂದ ಅದಕ್ಕೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್ಎಸ್ಎಸ್) ಅಥವಾ ಸಿಆರ್‌ಪಿಸಿ ನಿಯಮಗಳು ಅನ್ವಯಿಸುವುದಿಲ್ಲ ಎಂಬ ಇ.ಡಿ. ವಾದವನ್ನು ನ್ಯಾಯಾಲಯ ಸಾರಾಸಗಟಾಗಿ ತಿರಸ್ಕರಿಸಿದೆ. ತನಿಖಾ ಸಂಸ್ಥೆಗಳ ಇಂತಹ ವಾದಗಳು ವ್ಯಕ್ತಿಯೊಬ್ಬನ ಮೂಲಭೂತ ಹಕ್ಕುಗಳನ್ನೇ ನುಂಗಿಹಾಕುವ ಅಪಾಯವನ್ನು ಹೊಂದಿರುತ್ತವೆ ಎಂಬುದನ್ನು ಕೋರ್ಟ್ ಸೂಕ್ಷ್ಮವಾಗಿ ಗಮನಿಸಿದೆ.

ಕಾನೂನಿನಲ್ಲಿ Shall (ಕಡ್ಡಾಯ) ಎಂಬ ಪದವಿದ್ದರೆ ಅದನ್ನು ಪಾಲಿಸಲೇಬೇಕು. ಆರೋಪಿಯ ವಾದ ಆಲಿಸದೆ ನ್ಯಾಯಾಲಯ ಪ್ರಕ್ರಿಯೆ ಆರಂಭಿಸಿದರೆ ಅದು ಮೊದಲ ದಿನದಿಂದಲೇ ಅಸಿಂಧು ಎನಿಸಿಕೊಳ್ಳುತ್ತದೆ ಎಂದು ನ್ಯಾಯಪೀಠ ಕಟುವಾಗಿ ನುಡಿದಿದೆ. ಇದು ಇನ್ನು ಮುಂದೆಯಾದರೂ ತನಿಖಾ ಸಂಸ್ಥೆಗಳು ಮತ್ತು ವಿಶೇಷ ನ್ಯಾಯಾಲಯಗಳು ಹೆಚ್ಚು ಜವಾಬ್ದಾರಿಯಿಂದ ವರ್ತಿಸಬೇಕು ಎಂಬ ಎಚ್ಚರಿಕೆಯೇ ಆಗಿದೆ.

ಇತ್ತೀಚಿನ ದಿನಗಳಲ್ಲಿ ಪಿಎಂಎಲ್ಎ ಕಾಯಿದೆಯು ರಾಜಕೀಯ ದ್ವೇಷ ಸಾಧನೆಗೆ ಮತ್ತು ವಿರೋಧಿಗಳನ್ನು ಹೆದರಿಸಲು ಬಳಸಲಾಗುತ್ತಿದೆ ಎಂಬ ವ್ಯಾಪಕ ಸಾರ್ವಜನಿಕ ಆಕ್ರೋಶವಿದೆ. ಇಂತಹ ಹೊತ್ತಿನಲ್ಲಿ, ಸಂವಿಧಾನದ 21ನೇ ವಿಧಿಯಡಿ ಜೀವಿಸುವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕನ್ನು ಎತ್ತಿಹಿಡಿದಿರುವುದು ನ್ಯಾಯಾಂಗದ ಮೇಲಿನ ನಂಬಿಕೆಯನ್ನು ಹೆಚ್ಚಿಸಿದೆ. ಸಿಆರ್‌ಪಿಸಿಯ ಸೆಕ್ಷನ್ 200ರಿಂದ 205 ರವರೆಗಿನ ದೂರು ಪ್ರಕ್ರಿಯೆಗಳನ್ನು ಪಿಎಂಎಲ್ಎನಿಂದ ದೂರವಿಟ್ಟರೆ ಅತ್ಯಂತ ವಿನಾಶಕಾರಿ ಪರಿಣಾಮಗಳು ಎದುರಾಗುತ್ತವೆ ಎಂಬ ಕೋರ್ಟ್ ಎಚ್ಚರಿಕೆ ಅತ್ಯಂತ ಸಮಯೋಚಿತವಾಗಿದೆ.

ವಿಶೇಷ ಕಾನೂನುಗಳು ಅಪರಾಧ ತಡೆಗೆ ಇರಬೇಕೇ ಹೊರತು, ನಾಗರಿಕರನ್ನು ವಿಚಾರಣೆಯಿಲ್ಲದೆ ಜೈಲಿಗಟ್ಟುವ ಅಸ್ತ್ರಗಳಾಗಬಾರದು. ಆರೋಪಿ ಅಪರಾಧಿಯೇ ಅಥವಾ ನಿರಪರಾಧಿಯೇ ಎಂಬುದನ್ನು ನಿರ್ಧರಿಸಲು ನ್ಯಾಯಾಲಯಕ್ಕೆ ಮುಕ್ತ ಅವಕಾಶವಿರಬೇಕು. ಆದರೆ, ಅದಕ್ಕೂ ಮುನ್ನ, ಪ್ರತಿಯೊಬ್ಬ ನಾಗರಿಕನಿಗೂ ಸಿಗಬೇಕಾದ ಕನಿಷ್ಠ ಮಾನವ ಹಕ್ಕು ಮತ್ತು ಕಾನೂನಾತ್ಮಕ ರಕ್ಷಣೆಯನ್ನು ಖಾತರಿಪಡಿಸುವುದು ಪ್ರಜಾಪ್ರಭುತ್ವದ ಅಸ್ತಿತ್ವಕ್ಕೆ ಅನಿವಾರ್ಯ. ಈ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು, ತನಿಖಾ ಸಂಸ್ಥೆಗಳ ಅತಿರೇಕದ ನಡೆಗೆ ಹಾಕಿದ ದೊಡ್ಡ ಬ್ರೇಕ್ ಹಾಗೂ ಸಂವಿಧಾನದ ಆಶಯಕ್ಕೆ ಸಂದ ಜಯ ಎನ್ನಬಹುದು.

ಬೋಧಿ ವೃಕ್ಷ

ಒಂಟೆಯ ಸಂತೃಪ್ತ ಭಾವ

ಒಂದು ಒಂಟೆ ಮರುಳುಗಾಡಿನಲ್ಲಿ ಬಾಳಿಕೊಂಡಿತ್ತು. ಮೇಲೆ ಸುಡುವ ಸೂರ್ಯ. ಕೆಳಗೆ ಕಾದ ಮರಳು. ಕುಡಿಯಲು, ತಿನ್ನಲು ಸಿಕ್ಕರೆ ಸಿಕ್ಕೀತು, ಸಿಗದಿದ್ದರೆ ಇಲ್ಲ! ಎತ್ತರ ದೇಹ, ಉದ್ದ ಕಾಲು, ಉದ್ದ ಮುಖ. ಬೆನ್ನಿನಲ್ಲಿ ಒಂದು ಶಾಶ್ವತ ಗಂಟು. ಒಂದು ರೀತಿಯಾದ ವಕ್ರ ಶರೀರ. ಭಗವಂತನಿಗೆ ಅದನ್ನೆಲ್ಲ ಕಂಡು ಕನಿಕರವೆನಿಸಿತು.

ಪ್ರತ್ಯಕ್ಷನಾಗಿ ಒಂಟೆಗೆ ಹೇಳಿದ, 'ನೀನು ತುಂಬಾ ಶ್ರಮಜೀವಿ. ಇಂಥ ಮರುಳುಗಾಡಿನ ಪ್ರತಿಕೂಲ ವಾತಾವರಣದಲ್ಲಿಯೂ ಸಾವಿರಾರು ವರುಷಗಳಿಂದ ಸಹನೆಯಿಂದ ಬಾಳುತ್ತಿರುವೆ. ನಿನಗೂ ಕುದುರೆಯಂಥ ಸುಂದರ ಶರೀರವಿದ್ದರೆ ಒಳ್ಳೆಯದಲ್ಲವೆ?''

ಒಂಟೆ ಹೇಳಿತು 'ಭಗವಂತನೇ ನೀನಿತ್ತ ಈ ಶರೀರದಲ್ಲಿ ಯಾವ ಕೊರತೆ ಇದೆ? ನನಗಿದೇ ಇರಲಿ ಸಾಕು. ಆ ಕುದುರೆ ಬಹಳ ಸುಂದರವಿರಬಹುದು. ಅದನ್ನು ತಂದು ನೀರಿಲ್ಲದ ಈ ಮರಳುಗಾಡಿನಲ್ಲಿ ಬಿಟ್ಟು ನೋಡು. ಒಂದು ದಿನ ಬದುಕಿ ಉಳಿಯುವುದೂ ಕಷ್ಟ!'

'ಆದರೆ ನಿನಗೇನಾದರೂ ಕೊಡಲೇಬೇಕೆಂದು ಬಂದಿರುವೆನಲ್ಲ' ಎಂದ ಭಗವಂತ. ಆಗ ಒಂಟೆ ಹೇಳಿತು, 'ಹಾಗಾದರೆ ಇನ್ನೊಮ್ಮೆ ನನಗೆ ಇಂಥ ಆಮಿಷವನ್ನು ಒಡ್ಡುವುದಿಲ್ಲ ಎಂಬ ಭರವಸೆಯನ್ನು ಕೊಡು, ಸಾಕು.' ಒಂಟೆಯ ಈ ಸಂತೃಪ್ತ ಭಾವವು ಮನುಷ್ಯರಿಗೆ ಏಕೆ ಇಲ್ಲವೆಂದು ಭಗವಂತನು ಯೋಚನೆಗೆ ತೊಡಗಿದ.

(ಆಧಾರ: ಕಥಾಮೃತ)

ಸಿದ್ದೇಶ್ವರ ಶ್ರೀಗಳು

ವಿಕ ತಗೋ ಕನ್ನಡ

ಬರಲು

ಬರಲು ಎಂದರೆ ಒಣಗಿದ ಕಡ್ಡಿ; ಅಂಥ ಒಣಕಡ್ಡಿಗಳನ್ನು ಒಟ್ಟುಸೇರಿಸಿ, ಕಟ್ಟಿ ಮಾಡಿದ ಕಸ ಗುಡಿಸುವ ಸಾಧನ; ಕಸಬರಲು, ಪೊರಕೆ. ಬರಲುವಿನ ಮತ್ತೊಂದು ಬಳಕೆಗೆ 'ಚಂದ್ರ ಮೂಡಿ ಬರಲು' ಪರಿಶೀಲಿಸಿ; ಅರ್ಥ ಸ್ಪಷ್ಟ.

ಧೂಮಕೇತುವಿನ ಹಿಂಬದಿಯು ಪೊರಕೆಯಂತೆ ಕಾಣುವುದರಿಂದ ಅದನ್ನು 'ಬರಲು ಚುಕ್ಕೆ' ಎಂದು ಕರೆದರು. ಇನ್ನು ವ್ಯಂಗ್ಯವಾಗಿ 'ಬರಲುಪೂಜೆ ಮಾಡು' ಎಂದರೆ, ಅದಕ್ಕೆ ಅರ್ಥ 'ಪೊರಕೆಯಿಂದ ಚಚ್ಚಿ ಅವಮಾನಪಡಿಸು'. ಹಿಂದೆ ಅಪರಾಧಿಗಳಿಗೆ ಗೊಬ್ಬುಳಿ ಗಿಡದ ಮುಳ್ಳಿನ ಬರಲುಗಳಿಂದ ಹೊಡೆಯುವ ಶಿಕ್ಷೆ ಇತ್ತು.

ಹಿರಿಯ ಸಾಹಿತಿ ವಿ. ಸೀತಾರಾಮಯ್ಯ ಅವರ ಅಕಾಡೆಮಿ ಪ್ರಶಸ್ತಿಪುರಸ್ಕೃತ ಕವನಸಂಗ್ರಹ 'ಅರಲು ಬರಲು'. ಅದರಲ್ಲಿ ಕವಿಗಳು ಬರೆದಿರುವ ದೀರ್ಘ ಪ್ರಸ್ತಾವನೆಯ ಸಾಲುಗಳು ಇವು: 'ಇದರಲ್ಲಿ ಯಾವುದಾದರೂ ಸೊಗಸುವುದಾದರೆ ಅದು ಅರಲು; ಉಳಿದುದು ಬರಲು, ಬತ್ತಲು.' ಇಲ್ಲಿಯ ಅರ್ಥ 'ಒಣಕಡ್ಡಿ' ಎನ್ನುವುದು ಗೊತ್ತಾಗುತ್ತದೆ. **- ಜಿ.ವಿ. ಅರುಣ**

– ಪದ ಸೂಚಿಸಿದವರು: **ಲಕ್ಷ್ಮಮ್ಮ ಜಿನ್ನೇನಹಳ್ಳಿ, ಹಾಸನ**

ಬತ್ತಳಿಕೆ



ವಿಕ ಜೋಕ್ FALLS

ಸಂಗ್ಯಾ: ನನ್ನ ಹೆಂಡ್ತಿಗೆ ಮೊನ್ನೆ ರಾತ್ರಿ ನಾನು ವಜ್ರದ ಉಂಗುರ ಉಡುಗೊರೆಯಾಗಿ ಕೊಟ್ಟಂತೆ ಕನಸು ಬಿತ್ತಂತೆ.

ಡುಂಗ್ಯಾ: ಹಾಗಾದರೆ ವಜ್ರದ ಉಂಗುರ ತಂದುಕೊಟ್ಟೆಯಾ?

ಸಂಗ್ಯಾ: ಇಲ್ಲ, 'ಕನಸುಗಳನ್ನು ನಂಬಬೇಡಿ' ಎನ್ನುವ ಪುಸ್ತಕ ತಂದುಕೊಟ್ಟೆ.

ಅಲ್ಲಿ ಏಲಿಯನ್‌ಗಳಿವೆ, ಅದೊಂದು ದೆವ್ವ-ಪಿಶಾಚಿಗಳ ತಾಣ ಎಂದೆಲ್ಲ ಮನುಷ್ಯರಿಂದ ಅಪಖ್ಯಾತಿಗೆ ಒಳಗಾಗಿರುವ 'ಬರ್ಮುಡಾ ಟ್ರಯಾಂಗಲ್'ನ ರಹಸ್ಯವನ್ನು ವಿಜ್ಞಾನಿಗಳು ಬಿಚ್ಚಿಟ್ಟಿದ್ದಾರೆ. ಇದೊಂದು ಶುದ್ಧ ವಿಜ್ಞಾನ ಹಾಗೂ ಭೂವೈಜ್ಞಾನಿಕ ವಿಸ್ಮಯವೇ ವಿನಾ, ಅಲ್ಲಿ ಹಡಗು-ವಿಮಾನಗಳನ್ನು ನುಂಗುವ ಇನ್ನಾವುದೋ ಅಲೌಕಿಕ ಶಕ್ತಿ ಇಲ್ಲ ಎಂಬುದನ್ನು ಇತ್ತೀಚಿನ ಸಂಶೋಧನೆಗಳು ಸಾಬೀತುಪಡಿಸಿವೆ.

ದೆವ್ವವಲ್ಲ, ಇದು ಶುದ್ಧ ಸೈನ್ಸ್!

■ ಆತೀಶ್ ಬಿ. ಕನ್ನಾಳೆ

ವಿಕ ಸೈನ್ಸ್ ಕೆಫೆ

ಜಗತ್ತು ವಿಸ್ಮಯಗಳ ಅಕ್ಷಯ ಪಾತ್ರೆ !
-ಪೂರ್ಣಚಂದ್ರ ತೇಜಸ್ವಿ

ಹೌದು, ಕಣ್ಣಿಗೆ ಕಾಣದ ಅದೆಷ್ಟೋ ಕೌತುಕಗಳನ್ನು ಪ್ರಕೃತಿ ತನ್ನ ಒಡಲಿನಲ್ಲಿ ಇಟ್ಟುಕೊಂಡಿದೆ. ವಿಜ್ಞಾನಿಗಳು ಆ ಕುತೂಹಲಗಳ ಬೆನ್ನು ಹತ್ತಿ ಅದರ ಹಿಂದಿನ ಕಾರಣಗಳನ್ನು ಪತ್ತೆ ಹಚ್ಚುವ ಕೆಲಸವನ್ನು ಕಾಲ ಕಾಲಕ್ಕೆ ಮಾಡುತ್ತಲೇ ಬರುತ್ತಿದ್ದಾರೆ. 'ಬರ್ಮುಡಾ ಟ್ರಯಾಂಗಲ್' ಕೂಡ ಈ ನಿಗೂಢತೆಗಳ ಸಾಲಿನಲ್ಲಿ ನಿಲ್ಲುತ್ತದೆ.

ಉತ್ತರ ಅಟ್ಲಾಂಟಿಕ್ ಮಹಾಸಾಗರದ ಪಶ್ಚಿಮ ಭಾಗದಲ್ಲಿರುವ ಈ ಪ್ರದೇಶದೊಂದಿಗೆ ಇತಿಹಾಸದಲ್ಲಿ ಕೆಲವು ಕಾಲ್ಪನಿಕ ಕಥೆಗಳು ತಳುಕು ಹಾಕಿಕೊಂಡಿವೆ. ಅದಕ್ಕಾಗೇ ಇದನ್ನು 'ಡೆವಿಲ್ಸ್ ಟ್ರಯಾಂಗಲ್' ಎಂದೂ ಕರೆಯಲಾಗುತ್ತದೆ. ಯೋಚಿಸಿ; ಬೃಹತ್ ವಿಮಾನ, ಹಡಗಿನಲ್ಲೋ ಕುಟುಂಬಗಳು ಸಂತೋಷದಿಂದ ಸಂಚರಿಸುತ್ತಿರುತ್ತವೆ. ಆ ಪ್ರವಾಸಿಗರ ಕಣ್ಣುಗಳಲ್ಲಿ ಸಾವಿರಾರು ಕನಸುಗಳು ಮನೆ ಮಾಡಿರುತ್ತವೆ. ಆದರೆ, ಯಾವ ಮುನ್ಸೂಚನೆಯೂ ನೀಡದೇ ದಿಢೀರ್ ಆಗಿ ಹಡಗು ಅಥವಾ ವಿಮಾನ ಕಣ್ಮರೆಯಾದರೆ! ಅವುಗಳು ಮುಳುಗಿರುವುದಕ್ಕೆ ಸಣ್ಣ ಅವಶೇಷವೂ ಸಿಗದಿದ್ದರೆ ಹೇಗೆ? ಈ ಟ್ರಯಾಂಗಲ್ ಕೂಡ ಅಷ್ಟೇ ನಿಗೂಢ. ಹತ್ತಿರ ಹೋದದ್ದು ಏನೇ ಇರಲಿ, ಯಾರೇ ಇರಲಿ ಮುಲಾಜಿಲ್ಲದೇ ಆಯಸ್ಕಾಂತದಂತೆ ಸೆಳೆದು ನುಂಗಿ ಬಿಡುತ್ತದೆ. ಹೀಗಾಗಿ, ಜಗತ್ತಿನ ಪ್ರಮುಖ ನಿಗೂಢಗಳ ಸಾಲಿನಲ್ಲಿ 'ಬರ್ಮುಡಾ ಟ್ರಯಾಂಗಲ್' ಅಗ್ರಸ್ಥಾನದಲ್ಲಿದೆ.

ಸಾಮಾನ್ಯವಾಗಿ ನೈಜ ಘಟನೆಗಳೊಂದಿಗೆ ಕಾಲ್ಪನಿಕ ಕಥೆಗಳು ಸೇರಿಕೊಂಡರೆ ಆ ವಿಷಯ ಸಮಾಜದಲ್ಲಿ ಹೆಚ್ಚೆಚ್ಚು ಚರ್ಚೆಗೆ ಗ್ರಾಸವಾಗುತ್ತದೆ. ಬರ್ಮುಡಾ ಟ್ರಯಾಂಗಲ್ ವಿಚಾರದಲ್ಲೂ ಅಂಥದ್ದೇ ಒಂದು ವಿಚಿತ್ರ ನಡೆಯಿತು. 1974ರಲ್ಲಿ ಚಾರ್ಲಿ ಬರ್ಲಿಟ್ಜ್ ಅವರು 'ದಿ ಬರ್ಮುಡಾ ಟ್ರಯಾಂಗಲ್' ಎಂಬ ಕೃತಿ ರಚಿಸಿದ್ದರು. ಅದರಲ್ಲಿ ಬಹುಮುಖ್ಯವಾಗಿ 'ನೂರಾರು ಹಡಗುಗಳು ಮತ್ತು ವಿಮಾನಗಳು ಯಾವುದೇ ಸುಳಿವಿಲ್ಲದೇ ಅವಶೇಷಗಳೂ ಸಿಗದೇ ಮಾಯವಾಗಿವೆ ಎಂದು ಪ್ರತಿಪಾದಿಸಿದ್ದರು. ನಾಪತ್ತೆಗೆ ಅಸಾಮಾನ್ಯ ವಿದ್ಯಮಾನಗಳು, ಅನ್ಯಗ್ರಹ ಜೀವಿಗಳು ಅಥವಾ ಅಟ್ಲಾಂಟಿಸ್‌ನಂತಹ ಮುಳುಗಿರುವ ನಗರಗಳ ರಹಸ್ಯ ತಂತ್ರಜ್ಞಾನಗಳೇ ಕಾರಣ ಎಂದು ವಾದಿಸಿದ್ದರು. ಆದರೆ, ಈ ಅಂಶಗಳನ್ನು ವಿಜ್ಞಾನಿಗಳು ಮತ್ತು ಸಂಶೋಧಕರು ತಳ್ಳಿಹಾಕಿದ್ದಾರೆ. ಈ ಪ್ರದೇಶದಲ್ಲಿ ಯಾವುದೇ ಅಲೌಕಿಕ ಶಕ್ತಿಗಳಿಲ್ಲ, ಹೆಚ್ಚಿನ ದುರಂತಗಳಿಗೆ ಕೆಟ್ಟ ಹವಾಮಾನ, ಪ್ರಬಲ ಸಮುದ್ರ ಪ್ರವಾಹ (ಗಾಲ್ಫ್ ಸ್ಟ್ರೀಮ್) ಮತ್ತು ಮಾನವ ತಪ್ಪುಗಳೇ ಕಾರಣ ಎಂಬುದನ್ನು ಪ್ರತಿಪಾದಿಸಿದ್ದಾರೆ. ಯು.ಎಸ್. ಕೋಸ್ಟ್ ಗಾರ್ಡ್ ಮತ್ತು ನೋವಾದ ವರದಿಯ ಪ್ರಕಾರ, 'ಬರ್ಮುಡಾ ಟ್ರಯಾಂಗಲ್‌ನಲ್ಲಿ ಕಳೆದುಹೋಗುವ ಹಡಗು, ವಿಮಾನಗಳ ಪ್ರಮಾಣವು ಸಾಗರದ ಇತರೆ ಸಾಮಾನ್ಯ ಪ್ರದೇಶಗಳಷ್ಟೇ ಇದೆ.'

ಬರ್ಮುಡಾ ಮುಳುಗದಂತೆ ಕಾಯುತ್ತಿದೆ 20 ಕಿ.ಮೀ ದಪ್ಪದ ಬಂಡೆ!



ಕೊಲಂಬಸ್ ಡೈರಿಯಲ್ಲಿ ಬರ್ಮುಡಾ

ಉತ್ತರ ಅಂಟ್ಲಾಟಿಕ್ ಸಮುದ್ರದ ಪಶ್ಚಿಮ ಭಾಗದಲ್ಲಿನ ಬರ್ಮುಡಾ, ಪೋರ್ಟೋರಿಕೊ ಮತ್ತು ಫ್ಲೋರಿಡಾ ತುದಿಯನ್ನೊಳಗೊಂಡ ಸಮುದ್ರ ವ್ಯಾಪ್ತಿಯನ್ನು 'ಬರ್ಮುಡಾ ಟ್ರಯಾಂಗಲ್' ಎಂದು ಗುರುತಿಸಲಾಗಿದೆ. ಈ ಪ್ರದೇಶ ಪತ್ತೆಯಾದುದ್ದರ ಇತಿಹಾಸಕ್ಕೆ ಇಣುಕಿ ನೋಡಿದರೆ ಅದು ನಮ್ಮನ್ನು ಕರೆದೊಯ್ಯುವುದು ಪ್ರಸಿದ್ಧ ನಾವಿಕ ಕ್ರಿಸ್ಟೋಫರ್ ಕೊಲಂಬಸ್ ಕಾಲಕ್ಕೆ. ಅವರು 1492ರಲ್ಲಿ ಈ ಪ್ರದೇಶದ ಮೂಲಕ ಹಾದುಹೋಗುವಾಗ ಹಡಗಿನ ದಿಕ್ಸೂಚಿ ವಿಚಿತ್ರವಾಗಿ ವರ್ತಿಸಿತ್ತು. ಆಕಾಶದಲ್ಲಿ ಬೆಂಕಿಯ ಉಂಡೆಯೊಂದು ಸಮುದ್ರಕ್ಕೆ ಬಿದ್ದಂತೆ ಭಾಸವಾಯಿತು. ಈ ಸಂಗತಿಯನ್ನು ಕೊಲಂಬಸ್ ತಮ್ಮ ದಿನಚರಿ ಪುಸ್ತಕದಲ್ಲಿ ದಾಖಲಿಸಿದ್ದಾರೆ.

20 ಕಿ.ಮೀ ದಪ್ಪದ ಬಂಡೆ ಪತ್ತೆ!

ಲಂಕೆಗೆ ವಾನರರು ಕಲ್ಲಿನ ಬಂಡೆ ಬಳಸಿ ಸೇತುವೆ ಕಟ್ಟಿದರು ಎನ್ನುವ ಕತೆ ರಾಮಾಯಣದಲ್ಲಿ ಇದೆಯಲ್ಲಾ, ಅಂಥದ್ದೇ ವಿಸ್ಮಯ ಈ ಬರ್ಮುಡಾ ಟ್ರಯಾಂಗಲ್ ಭಾಗದಲ್ಲಿ 2026ರ ಮೇ ನಲ್ಲಿ ನಡೆಸಿದ ಸಂಶೋಧನೆ ವೇಳೆ ಪತ್ತೆಯಾಗಿದೆ. ಅಮೆರಿಕದ ಕಾರ್ನೆಗಿ ಸೈನ್ಸ್ ಸಂಸ್ಥೆ ಮತ್ತು ಯೇಲ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಭೂಕಂಪನದ ತರಂಗಗಳನ್ನು ಬಳಸಿ ಸಮುದ್ರದ ಆಳವನ್ನು ಸ್ಕ್ಯಾನ್ ಮಾಡಿ ವರದಿಯೊಂದನ್ನು ನೀಡಿದ್ದಾರೆ. ಅದರಂತೆ, ಬರ್ಮುಡಾ ಟ್ರಯಾಂಗಲ್ ಭಾಗದಲ್ಲಿ 20 ಕಿ.ಮೀ. ದಪ್ಪದ ಬೃಹತ್ ಬಂಡೆ ಪತ್ತೆಯಾಗಿದೆ. ಈ ಕಲ್ಲಿನ ಪದರ ಕಡಿಮೆ ಸಾಂದ್ರತೆಯನ್ನು ಹೊಂದಿದ್ದು ವಿಶೇಷವಾಗಿದೆ. ಸಾಮಾನ್ಯವಾಗಿ ಜ್ವಾಲಾಮುಖಿ ಚಟುವಟಿಕೆ ಸ್ಥಗಿತಗೊಂಡ ಬಳಿಕ ಅತಿಯಾದ ಭಾರದಿಂದಾಗಿ ಜ್ವಾಲಾಮುಖಿ ದ್ವೀಪಗಳು ನೀರಿನಲ್ಲಿ ಮುಳುಗುತ್ತವೆ. ಇದು ನೈಸರ್ಗಿಕ ಕ್ರಿಯೆ ಕೂಡ ಆಗಿದೆ. ಆದರೆ, 4 ಕೋಟಿ ವರ್ಷಗಳ ಹಿಂದೆ ಜ್ವಾಲಾಮುಖಿ ಚಟುವಟಿಕೆ ನಿಂತರೂ ಬರ್ಮುಡಾ ದ್ವೀಪ ಮಾತ್ರ ಸಮುದ್ರ ಮಟ್ಟಕ್ಕಿಂತ ಸುಮಾರು 1600 ಅಡಿ ಎತ್ತರದಲ್ಲಿ ಗಟ್ಟಿಯಾಗಿ ನಿಂತಿದೆ. ಇದಕ್ಕೆ ಕಾರಣ ಅದರಡಿಯಲ್ಲಿ ಪತ್ತೆಯಾಗಿರುವ 20 ಕಿ.ಮೀ. ದಪ್ಪದ ಬಂಡೆ. ಇದು ದ್ವೀಪವು ಮುಳುಗದಂತೆ ನೀರಿನ ಒಳಗೆ ತೆಪ್ಪದ ರೀತಿಯಲ್ಲಿ ಕೆಲಸ ಮಾಡುತ್ತಿದೆ.

ದಾರಿ ತಪ್ಪುವ ದಿಕ್ಸೂಚಿ

- ಬರ್ಮುಡಾ ಟ್ರಯಾಂಗಲ್ ಭಾಗದ ಸಮುದ್ರದೊಳಗೆ ಗಲ್ಫ್ ಸ್ಟ್ರೀಮ್ ಹರಿವಿದ್ದು ಇದರ ಅಗಲ **64-80** ಕಿ.ಮೀ. ಇದ್ದು, ಫ್ಲೋರಿಡಾ ಜಲಸಂಧಿಯಿಂದ ತೆರೆದ ಅಟ್ಲಾಂಟಿಕ್‌ವರೆಗೆ ಸುಮಾರು **1931.21** ಕಿ.ಮೀ. ಇದೆ. ಇದಕ್ಕೆ ಯಾವುದೇ ಅವಶೇಷಗಳು ಸಿಕ್ಕರೆ ಸಾವಿರಾರು ಕಿ.ಮೀ. ಸೆಳೆದೊಯ್ಯುತ್ತದೆ.
- ಅಟ್ಲಾಂಟಿಕ್, ಭೀಕರ ಚಂಡಮಾರುತಗಳು ಹುಟ್ಟಿಕೊಳ್ಳುವ ಜಾಗ. ರಾಕ್ಷಸ ಅಲೆಗಳು ಇಲ್ಲಿ ಏಳುತ್ತವೆ. ಅದಕ್ಕೆ ಹಡಗು, ವಿಮಾನ ಸಿಲುಕಿದರೆ ಕಥೆ ಮುಗಿಯಿತು. ಇಲ್ಲಿನ ಕಾಂತೀಯ ವೈಪರೀತ್ಯಗಳು ಹಡಗುಗಳ ದಿಕ್ಸೂಚಿಯ ದಾರಿಯನ್ನೂ ತಪ್ಪಿಸುತ್ತವೆ.
- ಸಮುದ್ರದ ತಳದಲ್ಲಿ ಲಕ್ಷಾಂತರ ವರ್ಷಗಳಿಂದ ಕೊಳೆಯುತ್ತಿರುವ ಜೈವಿಕ ಪಳೆಯುಳಿಕೆಗಳು, ಬ್ಯಾಕ್ಟೀರಿಯಾಗಳ ಕ್ರಿಯೆಯಿಂದಾಗಿ ಮೀಥೇನ್ ಅನಿಲ (ಮೀಥೇನ್ ಗ್ಯಾಸ್ ಬಾಂಬ್) ಬಿಡುಗಡೆಯಾಗುತ್ತದೆ. ಸಮುದ್ರದೊಳಗೆ ಭೂಕಂಪನ ಅಥವಾ ಭೂಕುಸಿತಗಳು ಸಂಭವಿಸಿದಾಗ ಘನರೂಪ ಒಡೆದು ಬುಗ್ಗೆಗಳು ಮೇಲೆ ಬರುವುದರಿಂದ ಸಮುದ್ರದ ನೀರಿನ ಸಾಂದ್ರತೆ ಕ್ಷೀಣಿಸಿ, ಹಡಗುಗಳು ತೇಲಲು ಸಾಧ್ಯವಾಗದೇ ಮುಳುಗುತ್ತವೆ.

ಭಾರತದಲ್ಲೂ ಇವೆ ನಿಗೂಢ ಜಾಗಗಳು

ಬರ್ಮುಡಾ ಟ್ರಯಾಂಗಲ್‌ನಂತಹ ಅಪಾಯಕಾರಿ ಸ್ಥಳಗಳು ನಮ್ಮ ದೇಶದಲ್ಲೂ ಇವೆ. ಇಲ್ಲಿಯೂ ನಿಗೂಢವಾಗಿ ವಾಯುವಿಮಾನಗಳು ಕಣ್ಮರೆಯಾಗಿವೆ. ಹಿಮಾಚಲ ಪ್ರದೇಶದಲ್ಲಿರುವ 'ಪಾರ್ವತಿ ಕಣಿವೆ'ಯಲ್ಲಿ ಕಳೆದ ಮೂರು ದಶಕಗಳಲ್ಲಿ ಡಜನ್‌ಗಟ್ಟಲೆ ಚಾರಣಿಗರು ಕಣ್ಮರೆಯಾಗಿದ್ದಾರೆ. ಭಾರತ-ಮ್ಯಾನ್ಮಾರ್ ಗಡಿಯಲ್ಲಿ 'ಲೇಕ್ ಆಫ್ ನೋ ರಿಟರ್ನ್' ಎಂಬ ಸರೋವರವಿದೆ. ಇದು ಸಹ ಅನೇಕ ವಿಮಾನಗಳನ್ನು ನಿಗೂಢವಾಗಿ ನುಂಗಿದೆ. ಅರುಣಾಚಲ ಪ್ರದೇಶದ ಪರ್ವತ ಕಾರಿಡಾರ್‌ಗಳನ್ನು ತಜ್ಞರು ಭಾರತದ ಬರ್ಮುಡಾ ಟ್ರಯಾಂಗಲ್ ಎಂದು ಕರೆದಿದ್ದಾರೆ. ಇಲ್ಲಿ ಅಧಿಕ ಸಂಖ್ಯೆಯಲ್ಲಿ ಮಿಲಿಟರಿ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳು ಅಪಘಾತಕ್ಕೀಡಾಗಿವೆ.

ಹಾಲಿವುಡ್ ತೆರೆಯಲ್ಲೂ ಹವಾ

ಚಾರ್ಲಿ ಬರ್ಲಿಟ್ಜ್ ಕೃತಿ ಆಧರಿಸಿ 1978ರಲ್ಲಿ '**ದಿ ಬರ್ಮುಡಾ ಟ್ರಯಾಂಗಲ್**' ಸಿನಿಮಾ ತೆರೆ ಕಂಡು ದೊಡ್ಡ ಸದ್ದು ಮಾಡಿತ್ತು. ಮನೋವೈಜ್ಞಾನಿಕ ಹಾರರ್ ಚಿತ್ರ '**ಟ್ರಯಾಂಗಲ್**' 2009ರಲ್ಲಿ ಬೆಳ್ಳಿ ಪರದೆಯ ಮೇಲೆ ಪ್ರದರ್ಶನಗೊಂಡಿತು. 2013ರಲ್ಲಿ '**ಪರ್ಸಿ ಜಾಕ್ಸನ್: ಸೀ ಆಫ್ ಮಾನ್‌ಸ್ಟರ್**', 1975ರಲ್ಲಿ '**ಸೇಟನ್ಸ್ ಟ್ರಯಾಂಗಲ್**', 1977ರಲ್ಲಿ '**ಏರ್‌ಪೋರ್ಟ್ 77**', 2001ರಲ್ಲಿ '**ಲಾಸ್ಟ್ ವೊಯೇಜ್**', 2005ರಲ್ಲಿ ಬಿಬಿಸಿ ಮತ್ತು ಇತರ ಸಂಸ್ಥೆಗಳು ಜಂಟಿಯಾಗಿ '**ದಿ ಟ್ರಯಾಂಗಲ್**' ಸರಣಿ ಬಿಡುಗಡೆ ಮಾಡಿತ್ತು.

ಏನೆಲ್ಲ ನುಂಗಿದೆ ಬರ್ಮುಡಾ?

- **1800:** ಯುಎಸ್ ನೌಕಾಪಡೆಯ ಸ್ಕೂನರ್ ಹಡಗು. 91 ಜನರಿದ್ದರು.
- **1814:** ಯುಎಸ್ ನೌಕಾಪಡೆಯ ಯುದ್ಧನೌಕೆ ಯುಎಸ್ಎಸ್ ವಾಸ್ಪ್, 141 ಜನರಿದ್ದರು.
- **1918:** ಮುನ್ನೂರಕ್ಕೂ ಹೆಚ್ಚು ಸಿಬ್ಬಂದಿ ಇದ್ದ ಯುಎಸ್ ನೌಕಾಪಡೆಯ ಕೊಲಿಯರ್ ಯುಎಸ್ಎಸ್ ಸೈಕ್ಲೋಪ್ಸ್ ಒಂದೇ ಒಂದು ಕುರುಹು ಇಲ್ಲದೇ ಕಣ್ಮರೆಯಾಯಿತು. ಇದು ಯುಎಸ್ ನೌಕಾ ಇತಿಹಾಸದಲ್ಲೇ ಅತಿ ದೊಡ್ಡ ಜೀವಹಾನಿ.
- **1948:** ಬ್ರಿಟಿಷ್ ದಕ್ಷಿಣ ಅಮೆರಿಕದ ಏರ್‌ವೇಸ್ ಸ್ಟಾರ್ ಟೈಗರ್ ಪ್ರಯಾಣಿಕ ವಿಮಾನವು 31 ಜನರನ್ನು ಹೊತ್ತು ಹಾರಾಟದ ಮಧ್ಯೆಯೇ ಕಣ್ಮರೆ. ಪೋರ್ಟೋರಿಕೋದಿಂದ ಮಿಯಾಮಿಗೆ 32 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಡಗ್ಲಾಸ್ ಡಿಸಿ 3 ವಿಮಾನವೂ ನಾಪತ್ತೆಯಾಗಿತ್ತು. ವಿಚಿತ್ರವೆಂದರೆ, ಯಾವುದೇ ಅವಶೇಷಗಳು ಪತ್ತೆಯಾಗಿರಲಿಲ್ಲ.
- **1963:** ಕರಗಿದ ಗಂಧಕವನ್ನು ಹೊತ್ತೊಯ್ಯುತ್ತಿದ್ದ ಬೃಹತ್ ಟ್ಯಾಂಕರ್ ಎಸ್ಎಸ್ ಮರೈನ್ ಸಲ್ಫರ್ ಕ್ವೀನ್ 39 ಸಿಬ್ಬಂದಿಯೊಂದಿಗೆ ಫ್ಲೋರಿಡಾ ಜಲಸಂಧಿ ಬಳಿ ನಾಪತ್ತೆ.
- **2015:** ಎಸ್ಎಸ್ಎಲ್ ಫಾರೊ ಸರಕು ಹಡಗು ಜೋಕ್ವಿನ್ ಚಂಡಮಾರುತ ಸಮಯದಲ್ಲಿ ಮುಳುಗಿ 33 ಸಿಬ್ಬಂದಿ ಸಾವನ್ನಪ್ಪಿದ್ದರು. ನಂತರ 15 ಸಾವಿರ ಅಡಿ ಸಮುದ್ರದಾಳದಲ್ಲಿ ಅದು ಪತ್ತೆಯಾಗಿತ್ತು.

aatish.kannale@timesofindia.com

ಎಐ ಪ್ರೀತಿಯಲ್ಲಿ ಇರೋ ಸುಖ ಗೊತ್ತೇ ಇರಲಿಲ್ಲ!

ಚೆನ್ನಾಗಿ ಕೆಲಸ ಮಾಡಲಿ ಎಂದು ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಎಐ ಬಳಕೆಯನ್ನು ಪ್ರೋತ್ಸಾಹಿಸಿವೆ. ಆಫೀಸ್ ಜೀವಿಗಳು ಕೆಲಸದ ಜೊತೆಗೆ ಅದರೊಂದಿಗೆ ಡುಯೆಟ್ ಹಾಡುವ ಮಟ್ಟಿಗೆ ಬಾಂಧವ್ಯ ಹೊಂದುತ್ತಿದ್ದಾರೆ ಎನ್ನುವ ಮಾಹಿತಿ ಸಮೀಕ್ಷೆಯಿಂದ ತಿಳಿದುಬಂದಿದೆ.

ಟೆಕ್ಕೋಪನಿಷತ್

ಹರ್ಷವರ್ಧನ್ ಸುಳ್ಯ



ಭಾವನೆಗಳಿಗೆ AIನಲ್ಲಿ ಜಾಗವಿದೆ

ಕಚೇರಿಗಳಲ್ಲಿ ಎಐ ಬಳಕೆಯನ್ನು ಕಂಪನಿಗಳೇ ಪ್ರೋತ್ಸಾಹಿಸುತ್ತಿವೆ. ಕೆಲ ಉದ್ಯೋಗಿಗಳು ಈ ಎಐ ಏಜೆಂಟರ ಬಳಿ ಇಮೇಲ್ ಬರೆಯುವುದು, ಮೀಟಿಂಗ್ ಪಾಯಿಂಟುಗಳನ್ನು ಬರೆದಿಟ್ಟುಕೊಳ್ಳುವುದು, ಪ್ರೆಸೆಂಟೇಷನ್ ಸಿದ್ಧಪಡಿಸುವುದು ಇವುಗಳನ್ನಷ್ಟೇ ಮಾಡಿಸಿಕೊಳ್ಳುತ್ತಿಲ್ಲ, ತಮ್ಮ ನಂಬಿಕೆ, ಭಾವನೆಗಳು ಎಷ್ಟರಮಟ್ಟಿಗೆ ಸಕಾಲಿಕ ಮತ್ತು ಎಷ್ಟರ ಮಟ್ಟಿಗೆ ಕರೆಕ್ಟ್ ಎನ್ನುವುದನ್ನು ಅರಿಯಲೂ ಬಳಸಿಕೊಳ್ಳುತ್ತಿರುವ ಮಾಹಿತಿ ನೂತನ ಸಮೀಕ್ಷೆಯಿಂದ ಬಹಿರಂಗಗೊಂಡಿದೆ. ಮನಸ್ಸಿಗೆ ಸಮಾಧಾನ ತಂದುಕೊಳ್ಳುವ ನಿಟ್ಟಿನಲ್ಲಿ ಉದ್ಯೋಗಿಗಳು ಎಐ ಮೊರೆಹೋಗುತ್ತಿರುವ ಪ್ರವೃತ್ತಿ ಕಂಪನಿಗಳನ್ನು ಆತಂಕಕ್ಕೆ ನೂಕಿವೆ. ಏಕೆಂದರೆ ಈ ಸಮಾಧಾನ ತಂದುಕೊಳ್ಳುವ ಪ್ರಕ್ರಿಯೆಯಲ್ಲಿ ಉದ್ಯೋಗಿಗಳು ಎಐ ಜೊತೆ ಭಾವನಾತ್ಮಕ ಸಂಬಂಧವನ್ನು ಹೊಂದುತ್ತಿದ್ದಾರೆ. ಈ ಹಿಂದೆ ಮನಸ್ಸಿನ ದುಃಖ ತೋಡಿಕೊಳ್ಳುವಲ್ಲಿ ಸಹೋದ್ಯೋಗಿಗಳು, ಮ್ಯಾನೇಜರ್‌ಗಳು, ಕಂಪನಿಯಲ್ಲಿನ ಮಾರ್ಗದರ್ಶಕರು ನೆರವಾಗುತ್ತಿದ್ದರು. ಈಗ ಆ ಕೆಲಸ ಎಐ ಪಾಲಾಗಿದೆ. ಇದರಿಂದ ಕಂಪನಿ ಉದ್ಯೋಗಿಗಳ ಮಧ್ಯೆ ಭಾವನಾತ್ಮಕ ಬೆಸುಗೆಯ ಕೊರತೆ, ಕಂದಕ ಹೆಚ್ಚುತ್ತಾ ಹೋಗುವ ಸಾಧ್ಯತೆಯನ್ನು ಪರಿಣತರು ಅಂದಾಜಿಸಿದ್ದಾರೆ. ಭವಿಷ್ಯದಲ್ಲಿ ಎಐ ಬಳಕೆ ಕುರಿತು ಮಾನದಂಡಗಳು ಜಾರಿಯಾಗುವ ದಿನಗಳು ದೂರವಿಲ್ಲ, ಅಂದರೆ ಎಐ ಬಳಿ ಏನು ಮಾತಾಡಬೇಕು ಏನು ಮಾತಾಡಬಾರದು ಎನ್ನುವ ನಿಯಮಗಳನ್ನೂ ಕಂಪನಿಗಳು ನಿರ್ಧರಿಸುವ ದಿನಗಳು ದೂರವಿಲ್ಲ.

ಚಟಾಕಿ: ಇದರಲ್ಲಿ ಅಚ್ಚರಿ ಪಡುವಂಥದ್ದೇನಿಲ್ಲ. ಕಷ್ಟಕಾಲದಲ್ಲಿ ಸಹಾಯ ಮಾಡುವವರ ಜೊತೆ ಪ್ರೀತಿಯಲ್ಲಿ ಬೀಳುವುದು ಮನುಷ್ಯ ಸಹಜ ಗುಣ.

ಸ್ಮಾರ್ಟ್‌ಫೋನನ್ನು ಸ್ಮಾರ್ಟಾಗಿ ಕ್ಲೀನ್ ಮಾಡಿ

ವರ್ಷದಿಂದ ವರ್ಷಕ್ಕೆ ಸ್ಮಾರ್ಟ್‌ಫೋನ್‌ಗಳು ಸ್ಲಿಮ್, ತೂಕರಹಿತ ಆಗುತ್ತಾ ಬಂದಿವೆ. ಆದರೆ, ಕಾರ್ಯಕ್ಷಮತೆ ಮಾತ್ರ ಹಿಂದಿನ ಆವೃತ್ತಿಗಿಂತ ಸೂಪರ್ ಫಾಸ್ಟ್, ಇದರಿಂದಾಗಿ ಸ್ಮಾರ್ಟ್‌ಫೋನ್ ಡಿವೈಸ್‌ಗಳು ಸೂಕ್ಷ್ಮಪ್ರಕೃತಿಯನ್ನು ಮೈಗೂಡಿಸಿಕೊಳ್ಳುತ್ತಿವೆ. ಇದರಿಂದಾಗಿ ಅವುಗಳನ್ನು ಶುಚಿಗೊಳಿಸುವಾಗ ತುಸು ಎಚ್ಚರಿಕೆ ವಹಿಸುವುದು ಅನಿವಾರ್ಯವಾಗಿದೆ. ಸಾಂಪ್ರದಾಯಿಕ ವಿಧಾನಗಳಿಂದ ಸ್ವಚ್ಛಗೊಳಿಸುವುದರಿಂದ ಸ್ಮಾರ್ಟ್‌ಫೋನಿನ ಕೋಟಿಂಗ್, ಕೆಮಿಕಲ್ ಬಣ್ಣಗಳು ಅಂದಗೆಡುವ ಸಂದರ್ಭವಿರುತ್ತದೆ. ವಾರೆಂಟಿಗೆ ಧಕ್ಕೆಯಾಗದಂತೆ ಶುಚಿಗೊಳಿಸುವಾಗ ಪಾಲಿಸಬೇಕಾದ ಸೂಚನೆಗಳು ಇಲ್ಲಿವೆ.

- ಕ್ಲೀನ್ ಮಾಡುವ ಮುನ್ನ ಫೋನ್ ಸ್ವಿಚಾಫ್ ಮಾಡಿ. ಅದಕ್ಕೆ ಕೇಬಲ್‌ಗಳನ್ನು ಅಳವಡಿಸಿದ್ದರೆ ಅನ್‌ಪ್ಲಗ್ ಮಾಡಿ.
- ಸ್ಮಾರ್ಟ್‌ಫೋನ್‌ನ ಶೇ.90ರಷ್ಟು ಬ್ಯಾಕ್ಟೀರಿಯಾ ಇರುವುದು ಅದರ ಕೇಸ್‌ನಲ್ಲಿ. ಫೋನ್‌ನ ಕೇಸ್‌ಅನ್ನು ಬಿಚ್ಚಿ ಪ್ರತ್ಯೇಕವಾಗಿ ಬೆಚ್ಚಗಿನ ಸೋಪ್ ನೀರಲ್ಲಿ ಒರೆಸಿ ಒಣಗಲು ಬಿಡಿ.
- ಒಣಗಿದ ಮೈಕ್ರೊಫೈಬರ್ ಬಟ್ಟೆಯಲ್ಲಿ ಫೋನ್ ಸ್ವಚ್ಛಗೊಳಿಸಿ.
- 70% ಐಸೊಪ್ರೊಪಿಲ್ ಆಲ್ಕೊಹಾಲ್ ದ್ರಾವಣವನ್ನು ಬಟ್ಟೆಗೆ ಸಿಂಪಡಿಸಿ ಫೋನನ್ನು ಒರೆಸಿ. ದ್ರಾವಣವನ್ನು ನೇರವಾಗಿ ಫೋನ್ ಮೇಲೆ ಸಿಂಪಡಿಸಬೇಡಿ.
- ಫೋನನ್ನು ಒಣಗಿದ ಮೈಕ್ರೊಫೈಬರ್ ಬಟ್ಟೆಯಲ್ಲಿ ದಿನಕ್ಕೊಮ್ಮೆ ಒರೆಸುವುದರಿಂದ ಫಿಂಗರ್‌ಪ್ರಿಂಟ್‌ಗಳು, ಜಿಡ್ಡಿನ ಅಂಶವನ್ನು ನಿಯಂತ್ರಿಸಬಹುದಾಗಿದೆ.

ಚಟಾಕಿ: ತನ್ನನ್ನು ತಾನೇ ಕ್ಲೀನ್ ಮಾಡಿಕೊಳ್ಳುವ ಸ್ಮಾರ್ಟ್‌ಫೋನ್ ಆವಿಷ್ಕಾರದ ಅಗತ್ಯವಿದೆ.

ಗೂಗಲ್ ಆಡಿಯೊ ಗ್ಲಾಸ್

ಮಾರುಕಟ್ಟೆಯಲ್ಲಿ ವಿಆರ್ ಗಾಗಲ್ಸ್‌ಗಳು ಸದ್ದು ಮಾಡುತ್ತಿರುವ ಪ್ರಸ್ತುತ ಸಮಯದಲ್ಲಿ ಗೂಗಲ್ ತನ್ನ ನೂತನ ಆಡಿಯೊ ಗ್ಲಾಸಸ್ ವಿನ್ಯಾಸವನ್ನು ಅನಾವರಣಗೊಳಿಸಿದೆ. ಫೇಸ್‌ಬುಕ್‌ನ ಮಾತೃಸಂಸ್ಥೆ ಮೆಟಾದ ಸ್ಮಾರ್ಟ್ ಗ್ಲಾಸ್‌ಗೆ ಗೂಗಲ್‌ನ ಆಡಿಯೊ ಗ್ಲಾಸ್ ಪೈಪೋಟಿ ಒಡ್ಡಲಿದೆ ಎನ್ನಲಾಗಿದೆ. ಇದುವರೆಗೂ ಮೆಟಾ ಸ್ಮಾರ್ಟ್ ಗ್ಲಾಸಸ್‌ನ 70 ಲಕ್ಷ ಯುನಿಟ್‌ಗಳು ಬಿಕರಿಯಾಗಿವೆ. ಅದರಲ್ಲಿ ಕ್ಯಾಮೆರಾ ಅಡಕವಾಗಿದ್ದು ಎಐ ಟೆಕ್ನಾಲಜಿಯನ್ನು ಬಳಸಿಕೊಂಡು ಕಣ್ಣೆದುರಿನ ದೃಶ್ಯಾವಳಿಯನ್ನು ಸೆರೆ ಹಿಡಿದು ಬಳಕೆದಾರನಿಗೆ ಮಾಹಿತಿಯನ್ನು ಒದಗಿಸುವ ಕೆಲಸ ಸೇರಿದಂತೆ ಹತ್ತು ಹಲವು ಚಮತ್ಕಾರಗಳನ್ನು ಅವು ಮಾಡುತ್ತವೆ. ಗೂಗಲ್‌ನ ಆಡಿಯೊ ಕನ್ನಡಕದಲ್ಲಿ ಮೈಕ್ರೊಫೋನ್ ಇರಿಸಲಾಗಿದೆ. ಬಳಕೆದಾರ ಧ್ವನಿ ಮುಖಾಂತರ ನೀಡುವ ಸೂಚನೆಗಳನ್ನು



ಅದು ಗ್ರಹಿಸುತ್ತದೆ. ಅದರ ಜೊತೆಗೆ ಕ್ಯಾಮೆರಾ ಕೂಡ ಇದೆ. ಕಾಲ್ ಮಾಡುವುದು, ಸಂಗೀತ ಕೇಳುವುದು, ಫೋಟೋ ತೆಗೆಯುವುದು, ಜೆಮಿನಿ ಎಐ ಜೊತೆ ಸಂವಹನ ನಡೆಸುವುದು ಇವಿತ್ಯಾದಿ ಕೆಲಸಗಳನ್ನು ಆಡಿಯೊ ಗ್ಲಾಸ್ ನಿರ್ವಹಿಸುತ್ತದೆ. ಈ ಗ್ಲಾಸ್ ಆಂಡ್ರಾಯ್ಡ್ ಮತ್ತು ಆಪಲ್‌ನ ಐಒಎಸ್ ಆಪರೇಟಿಂಗ್ ಸಿಸ್ಟಮ್‌ಗಳ ಜೊತೆ ಹೊಂದುತ್ತದೆ. ಗೂಗಲ್ 2013ರಲ್ಲಿ ಬಿಡುಗಡೆಗೊಳಿಸಿದ ಗೂಗಲ್ ಗ್ಲಾಸ್ ಕನ್ನಡಕ ಮಾರುಕಟ್ಟೆಯಲ್ಲಿ ವಿಫಲವಾಗಿತ್ತು. ಈಗ ಎರಡು ದಶಕಗಳ ಬಳಿಕ ಕನ್ನಡಕ ಕ್ಷೇತ್ರದಲ್ಲಿ ಗೂಗಲ್ ಮತ್ತೆ ಅದೃಷ್ಟ ಪರೀಕ್ಷೆ ನಡೆಸಲಿದೆ.

ಚಟಾಕಿ: ಸುಧಾರಿತ ಕನ್ನಡಕ ಧರಿಸಿದರೆ ದೃಷ್ಟಿಕೋನ ಸುಧಾರಿಸೀತೇ...

ಎ.ಸಿ. ತಾಪಮಾನ ಎಷ್ಟಿರಬೇಕು?

ಹೊರಗಿನ ತಾಪಮಾನ ನಲವತ್ತಕ್ಕೂ ಮೇಲಿದ್ದಾಗ ಮನೆ ಇಲ್ಲವೇ ಕಚೇರಿಯೊಳಗೆ ಬಂದಾಕ್ಷಣ ಏರ್ ಕಂಡೀಷನರ್ ಆನ್ ಮಾಡಿ 16 ಡಿಗ್ರಿಗಳಿಗೆ ಇಳಿಸಿ ಕೂಲ್ ಮಾಡಿಕೊಳ್ಳುವುದು ಒಂದು ಕ್ಷಣ ಅಪ್ಯಾಯಮಾನ ಅನುಭವ ನೀಡುತ್ತದೆ. ಎ.ಸಿಯ ತಾಪಮಾನ ನಿಯಂತ್ರಿಸುವ ಬಗೆಗೆ ಕಚೇರಿಯಲ್ಲೇ ಆಗಲಿ ಮನೆಗಳಲ್ಲೇ ಆಗಲಿ ಜನರ ಮಧ್ಯೆ ಯುದ್ಧಗಳೇ ಸಂಭವಿಸುವುದೂ ಉಂಟು. ಎ.ಸಿ. ತಾಪಮಾನ ಎಷ್ಟಿರಬೇಕು ಎನ್ನುವ ಪ್ರಶ್ನೆಗೆ ಖಚಿತವಾದ ಉತ್ತರ ಎಂಬುದಿಲ್ಲ, ಅನೇಕರು 16– 18 ಡಿಗ್ರಿ ಸೆಟ್ ಮಾಡಿದರೆ ರೂಮ್ ಬೇಗನೆ ಕೂಲ್ ಆಗುತ್ತದೆ ಎಂದುಕೊಂಡಿರುತ್ತಾರೆ. ಆದರೆ ಇದು ತಪ್ಪು ಅಭಿಪ್ರಾಯ ಎನ್ನುತ್ತಾರೆ ಪರಿಣತರು. ಬಿಸಿ ವಾತಾವರಣದಲ್ಲಿ 16– 18 ಡಿಗ್ರಿ ತಾಪಮಾನ ಸೆಟ್ ಮಾಡುವುದರಿಂದ ಎಸಿಯಲ್ಲಿನ ಕಂಪ್ರೆಸರ್ ದೀರ್ಘಾವಧಿ ಕೆಲಸ ಮಾಡಬೇಕಾಗುತ್ತದೆ. ಇದರಿಂದ ಹೆಚ್ಚಿನ ವಿದ್ಯುತ್ ಖರ್ಚಾಗುತ್ತದೆ. ಪ್ರತಿ 1 ಡಿಗ್ರಿ ಹೆಚ್ಚಳಕ್ಕೆ 6 ಪರ್ಸೆಂಟ್ ವಿದ್ಯುತ್ ಹೆಚ್ಚು ವ್ಯಯವಾಗುತ್ತದೆ. ಮೇಲ್ನೋಟಕ್ಕೆ ಇದು ಚಿಕ್ಕ ವಿಷಯದಂತೆ ತೋರಿದರೂ ಬೇಸಗೆಯಲ್ಲಿ ವಾರ, ತಿಂಗಳಿಡೀ ಆನ್ ಮಾಡಿಕೊಂಡೇ ಇರುವ ಪರಿಸ್ಥಿತಿಯಲ್ಲಿ ಈ ಚಿಕ್ಕ ವ್ಯತ್ಯಾಸವೂ ಬೃಹತ್ತಾಗಿ ಪರಿಣಮಿಸುತ್ತದೆ. ಎ.ಸಿ. ಚಾಲನೆಗೆ, ಕಂಪ್ರೆಸರ್ ಮೇಲೆ ಒತ್ತಡ ನೀಡದ 24 ಡಿಗ್ರಿಯನ್ನು ಸೂಕ್ತ ತಾಪಮಾನವೆಂದು ಪರಿಗಣಿಸಲಾಗಿದೆ. ಆಧುನಿಕ ಎ.ಸಿ.ಗಳಲ್ಲಿ ಫ್ಯಾಕ್ಟರಿಗಳಿಂದಲೇ 24 ಡಿಗ್ರಿ ತಾಪಮಾನವನ್ನು ಮೊದಲೇ ಸೆಟ್ ಮಾಡಿರುತ್ತಾರೆ.

ಚಟಾಕಿ: ಕಡಿಮೆ ವಿದ್ಯುತ್ ಬಳಸುವ ಎ.ಸಿ ತಯಾರಿಕೆಯ ಕುರಿತು ಏಕೆ ಯಾರೂ ಯೋಚಿಸುತ್ತಿಲ್ಲ?

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. **ಕಚೇರಿ ವಿಳಾಸ:**- ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 142
ಶನಿವಾರ,23 ಮೇ 2026 | ಪುಟಗಳು: 14+10+4 | ಬೆಲೆ: ₹ 5.00
C
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ವಸತಿ ಇಲಾಖೆ
ಕರ್ನಾಟಕ ಗೃಹ ಮಂಡಳಿ
ಸಮುದಾಯ ನಿರ್ಮಾಣದತ್ತ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕ ಗೃಹ ಮಂಡಳಿ
ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು
ಸೂರ್ಯನಗರ 4ನೇ ಹಂತ, ಕೆ.ಹೆಚ್.ಬಿ. ಸೂರ್ಯ ಕ್ರೀಡಾ ಗ್ರಾಮದಲ್ಲಿ
ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ ಸಮಾರಂಭ

ಸನ್ಮಾನ್ಯ ಮುಖ್ಯಮಂತ್ರಿಗಳ 'ನಮ್ಮ ಮನೆ' ಯೋಜನೆಗೆ ಚಾಲನೆ

'ಸೂರ್ಯ ಶೈನ್' ಮತ್ತು 'ಸೂರ್ಯ ಡಿವೈನ್' ವಸತಿ ಸಮುಚ್ಚಯ ಕಾಮಗಾರಿಗಳಿಗೆ ಶಂಕುಸ್ಥಾಪನೆ

ವಸತಿ ಯೋಜನೆಗೆ ಭೂಮಿ ನೀಡಿದ ಭೂಮಾಲೀಕರುಗಳಿಗೆ ಸಾಂಕೇತಿಕ ನಿವೇಶನ ಹಂಚಿಕೆ

ಮುಖ್ಯಮಂತ್ರಿಯವರ ಅಮೃತ ಹಸ್ತದಿಂದ ಸಾರ್ವಜನಿಕ ಅರ್ಜಿದಾರರಿಗೆ ನಿವೇಶನ ಹಂಚಿಕೆ

ದಿನಾಂಕ 23ನೇ ಮೇ, 2026 ಶನಿವಾರ
ಸಮಯ ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಇಂಡ್ಲವಾಡಿ ಗ್ರಾಮ, 4ನೇ ಹಂತ, ಕೆ.ಹೆಚ್.ಬಿ. ಸೂರ್ಯ ಕ್ರೀಡಾ ಗ್ರಾಮ, ಬೆಂಗಳೂರು

ಸಮಾರಂಭದ ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಜಲಸಂಪನ್ಮೂಲ ಇಲಾಖೆ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ** ಅವರನ್ನು ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾದ **ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್** ಅವರು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾದ **ಶ್ರೀ ಕೆ.ಎಂ. ಶಿವಲಿಂಗೇಗೌಡ** ಹಾಗೂ ಆನೇಕಲ್ ವಿಧಾನಸಭಾ ಕ್ಷೇತ್ರದ ಶಾಸಕರಾದ **ಶ್ರೀ ಬಿ. ಶಿವಣ್ಣ** ಅವರೊಂದಿಗೆ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿರುವ ಸಂದರ್ಭ.

ಸಾರ್ವಜನಿಕ ಹಂಚಿಕೆ ಪತ್ರ ವಿತರಣೆ
ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ರೈತರಿಗೆ ಹಂಚಿಕೆ ಪತ್ರ ವಿತರಣ
ಶ್ರೀ ಕೆ.ಎಂ. ಶಿವಲಿಂಗೇಗೌಡ
ಮಾನ್ಯ ಅಧ್ಯಕ್ಷರು
ಕರ್ನಾಟಕ ಗೃಹ ಮಂಡಳಿ

ಅಧ್ಯಕ್ಷತೆ
ಶ್ರೀ ಬಿ. ಶಿವಣ್ಣ
ಮಾನ್ಯ ಶಾಸಕರು
ಆನೇಕಲ್ ವಿಧಾನಸಭಾ ಕ್ಷೇತ್ರ

ಗೌರವ ಅತಿಥಿ
ಡಾ|| ಸಿ.ಎನ್. ಮಂಜುನಾಥ್
ಮಾನ್ಯ ಸಂಸದರು
ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ

ಶ್ರೀ ಎಂ. ಕೃಷ್ಣಪ್ಪ
ಮಾನ್ಯ ಶಾಸಕರು
ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ

ಗೌರವ ಉಪಸ್ಥಿತಿ
ಶ್ರೀ ಡಿ.ಕೆ. ಸುರೇಶ್
ಮಾನ್ಯ ಅಧ್ಯಕ್ಷರು
ಬೆಂಗಳೂರು ಹಾಲು ಒಕ್ಕೂಟ

ರಾಜ್ಯದ ಎಲ್ಲಾ ಮಾನ್ಯ ಸಚಿವರು, ಸಂಸದರು, ವಿಧಾನಸಭಾ ಮತ್ತು ವಿಧಾನ ಪರಿಷತ್ತಿನ ಶಾಸಕರುಗಳು ಹಾಗೂ ಎಲ್ಲಾ ಆಯೋಗ, ನಿಗಮ ಮಂಡಳಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಆತ್ಮೀಯ ಸ್ವಾಗತ

ಸರ್ವರಿಗೂ ಆದರದ ಸುಸ್ವಾಗತ

ಡಾ. ಶಾಲಿನಿ ರಜನೀಶ್, ಭಾ.ಆ.ಸೇ
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ಶ್ರೀ ಕೆ.ಪಿ. ಮೋಹನ್ ರಾಜ್, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ

ಶ್ರೀ ಕೆ.ಎ. ದಯಾನಂದ, ಭಾ.ಆ.ಸೇ
ಆಯುಕ್ತರು, ಕರ್ನಾಟಕ ಗೃಹ ಮಂಡಳಿ

ಹಾಗೂ **ಸಮಸ್ತ ಕರ್ನಾಟಕ ಗೃಹ ಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ**

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಬೆಲೆ ಏರಿಕೆ | ಆಮದು ಸುಂಕ ಹೆಚ್ಚಳದಿಂದ ಬೇಡಿಕೆ ಪ್ರಮಾಣ ಕುಸಿತ | ಕ್ರಿಸಿಲ್ ಅಂದಾಜು

ಚಿನ್ನದ ಮಾರಾಟ ಇಳಿಕೆ, ಆದಾಯ ಏರಿಕೆ

ಹೊಸದಿಲ್ಲಿ: ಇತ್ತೀಚೆಗೆ ಚಿನ್ನ ಮತ್ತು ಬೆಳ್ಳಿ ಮೇಲಿನ ಆಮದು ಸುಂಕವನ್ನು ಶೇ. 6ರಿಂದ ಶೇ.15ಕ್ಕೆ ಏರಿಸಲಾಗಿದೆ. ಇದರಿಂದ ಈ ವಲಯದ ಬೆಳವಣಿಗೆ ಮೇಲೆ ಪ್ರತಿಕೂಲ ಪರಿಣಾಮದ ಆತಂಕದ ನಡುವೆಯೂ ವಾರ್ಷಿಕ ಆದಾಯದ ಬೆಳವಣಿಗೆ ಶೇ.20-25ರಷ್ಟು ಇರಲಿದೆ ಎಂದು ಶುಕ್ರವಾರ ಕ್ರಿಸಿಲ್ ವರದಿ ತಿಳಿಸಿದೆ.

ಈ ಬೆಳವಣಿಗೆ ದರ ಸಾಧಿಸಲು ದೇಶದ ಸಂಘಟಿತ ಚಿಲ್ಲರೆ ವಲಯ ಸಜ್ಜಾಗಿದೆ. ಚಿಲ್ಲರೆ ವಲಯ ಮಾರಾಟವು ಆಭರಣ, ನಾಣ್ಯ ಮತ್ತು ಬಿಸ್ಕೆಟ್‌ಗಳ ವಹಿವಾಟನ್ನು ಒಳಗೊಂಡಿದೆ. ಬಂಗಾರದ ಬೆಲೆ ನಿರಂತರ ಏರುಗತಿಯಲ್ಲೇ ಇದೆ. ಇದಲ್ಲದೆ ಆಮದು ನಿಯಂತ್ರಣ ಹೆಚ್ಚಿದೆ. ಇದರಿಂದ ಮಾರಾಟದ ಪ್ರಮಾಣದಲ್ಲಿ ಕುಸಿತವಾಗುತ್ತದೆ ಎಂಬ ಕಳವಳ ಹೆಚ್ಚಿದೆ. ಆದಾಗ್ಯೂ ಗಳಿಕೆಯ ಪಾಲು ಇಳಿಯುವುದಿಲ್ಲ ಎಂದು ವರದಿ ಸ್ಪಷ್ಟಪಡಿಸಿದೆ. ಬಂಗಾರ ತುಟ್ಟಿಯಾಗಿರುವುದರಿಂದ ದಾಸ್ತಾನು ನಿರ್ವಹಣಾ ವೆಚ್ಚ ಹೆಚ್ಚುತ್ತದೆ. ಬ್ಯಾಂಕ್ ಸಾಲ ಏರಿಕೆಗೂ ಕಾರಣವಾಗುತ್ತದೆ. ಆದರೆ ಆದಾಯ ಮತ್ತು ನಗದು ಹರಿವು ಪ್ರಮಾಣ ಎರಡರಲ್ಲೂ ಹೆಚ್ಚಳವಾಗುವುದರಿಂದ ಸಾಲದ ಮೇಲಿನ ಅವಲಂಬನೆಯನ್ನು ನಿಯಂತ್ರಿಸುತ್ತದೆ.

8% 2025-26ನೇ ಹಣಕಾಸು ವರ್ಷದಲ್ಲಿ ಚಿನ್ನದ ಮಾರಾಟದಲ್ಲಿ ಇಳಿಕೆ

ಶೇ.13 - 15 ಈ ಹಣಕಾಸು ವರ್ಷದಲ್ಲಿ ಆಗುವ ಕುಸಿತದ ಪ್ರಮಾಣ

720 ಟನ್ ಕಳೆದ ಹಣಕಾಸು ವರ್ಷದಲ್ಲಿ ಚಿನ್ನದ ಆಮದು ಪ್ರಮಾಣ

ಮಾರಾಟ ಪ್ರಮಾಣದಲ್ಲಿ ಇಳಿಕೆ

ಕಳೆದ ಹಣಕಾಸು ವರ್ಷದಲ್ಲಿ ಚಿನ್ನದ ಮಾರಾಟದಲ್ಲಿ ಶೇ.8ರಷ್ಟು ಇಳಿಕೆಯಾಗಿತ್ತು. ಈ ವರ್ಷ ಏರುತ್ತಿರುವ ಬೆಲೆ ಮತ್ತು ಆಮದಿಗೆ ಕಡಿವಾಣ ಹಾಕಿರುವುದರಿಂದ ಮಾರಾಟ ಕುಸಿತದ ಪ್ರಮಾಣ ಶೇ.13-15ರಷ್ಟಾಗಬಹುದು ಎಂದು ಕ್ರಿಸಿಲ್ ಅಂದಾಜು ಮಾಡಿದೆ. ಕಳೆದ ಹಣಕಾಸು ವರ್ಷದಲ್ಲಿ ಭಾರತ 720 ಟನ್ ಚಿನ್ನವನ್ನು ಆಮದು ಮಾಡಿಕೊಂಡಿತ್ತು. ಇದು 72 ಶತಕೋಟಿ ಡಾಲರ್ ವಿದೇಶಿ ವಿನಿಮಯ ಹೊರಹರಿವಿಗೆ ಕಾರಣವಾಗಿತ್ತು. ಕೋವಿಡ್ ತೀವ್ರವಾಗಿದ್ದ 2021ರ ಸಮಯದಲ್ಲಿ ಚಿನ್ನದ ಮಾರಾಟ ಪ್ರಮಾಣ ಕಡಿಮೆಯಾಗಿತ್ತು. ಅದನ್ನು ಹೊರತು ಪಡಿಸಿದರೆ ಈಗ ಆದರ ಮಾರಾಟದ ಇಳಿಕೆ ಪ್ರಮಾಣ ದಶಕದಲ್ಲೇ ಅತ್ಯಂತ ಕನಿಷ್ಠ ಮಟ್ಟ ತಲುಪುವ ನಿರೀಕ್ಷೆ ಇದೆ.

ಲಾಭದ ವರ್ಗಾವಣೆ!

''ಚಿನ್ನದ ಮೇಲಿನ ಕಸ್ಟಮ್ಸ್ ಸುಂಕವನ್ನು ಶೇ.6 ರಿಂದ 15ಕ್ಕೆ ಹೆಚ್ಚಿಸಿರುವ ಕೇಂದ್ರ ಸರಕಾರದ ನಿರ್ಧಾರವು ಚಿನ್ನದ ಆಭರಣಗಳ ಬೇಡಿಕೆಗೆ ತಡೆಯಾಗಲಿದೆ. ಹೂಡಿಕೆಯ ಬೇಡಿಕೆಯಿಂದಾಗಿ ಚಿನ್ನದ ಬಿಸ್ಕತ್ತುಗಳು ಮತ್ತು ನಾಣ್ಯಗಳ ಕಡೆಗೆ ಗಮನಾರ್ಹ ಬದಲಾವಣೆಯನ್ನು ನಾವು ಕಾಣುತ್ತಿದ್ದರೂ, ಒಟ್ಟಾರೆ ಬೇಡಿಕೆಯ ಕುಸಿತವನ್ನು ಅದು ಸಂಪೂರ್ಣವಾಗಿ ಸರಿದೂಗಿಸುವ ಸಾಧ್ಯತೆಯಿಲ್ಲ ಎಂದು ಕ್ರಿಸಿಲ್ ರೇಟಿಂಗ್ಸ್‌ನ ನಿರ್ದೇಶಕ ಹಿಮಾಂಕ್ ಶರ್ಮಾ ಹೇಳಿದ್ದಾರೆ. ಈ ಹಣಕಾಸು ವರ್ಷದಲ್ಲಿ ಚಿನ್ನದ ಆಭರಣ ಚಿಲ್ಲರೆ ವಲಯದ ಮಾರಾಟದ ಪ್ರಮಾಣ ಶೇ.13-15 ರಷ್ಟು ಕುಸಿಯಲಿದೆ. ಈ ಕುಸಿತ ದಶಕದ ದಾಖಲೆ ಮಟ್ಟ,'' ಎಂದು ಅವರು ಹೇಳಿದರು. ಈ ಬೆಳವಣಿಗೆಯಿಂದ ಚಿಲ್ಲರೆ ವ್ಯಾಪಾರಿಗಳಿಗೆ ದಾಸ್ತಾನು ಲಾಭ ದಕ್ಕಲಿದೆಯಾದರೂ, ಮಾರಾಟದ ಪ್ರಮಾಣವನ್ನು ಉತ್ತೇಜಿಸಲು ಈ ಲಾಭಾಂಶದಲ್ಲಿ ಕೊಂಚ ಪಾಲನ್ನು ಗ್ರಾಹಕರಿಗೆ ಹೆಚ್ಚಿನ ರಿಯಾಯಿತಿಗಳ ರೂಪದಲ್ಲಿ ನೀಡಬಹುದು ಎಂದು ಶರ್ಮಾ ಹೇಳಿದ್ದಾರೆ. ಗ್ರಾಹಕರು ಹಳೆಯ ಚಿನ್ನವನ್ನು ನೀಡಿ ಹೊಸದನ್ನು ಖರೀದಿಸುವುದೂ ಸೇರಿದಂತೆ ಹಲವು ಬದಲಿ ಕ್ರಮಗಳ ಮೊರೆ ಹೋಗಬಹುದು.

ಆರ್‌ಬಿಐನಿಂದ ಕೇಂದ್ರಕ್ಕೆ ₹2.87 ಲಕ್ಷ ಕೋಟಿ ಲಾಭಾಂಶ

ಮುಂಬಯಿ: ಕಳೆದ ಹಣಕಾಸು ವರ್ಷದಲ್ಲಿ ಗಳಿಸಿದ 2.87 ಲಕ್ಷ ಕೋಟಿ ರೂ.ಲಾಭಾಂಶವನ್ನು ಕೇಂದ್ರ ಸರಕಾರಕ್ಕೆ ನೀಡುವುದಾಗಿ ಶುಕ್ರವಾರ ಘೋಷಿಸಿದೆ.

2024-25ರಲ್ಲಿ ಕೇಂದ್ರಕ್ಕೆ ನೀಡಿದ ಲಾಭಾಂಶ 2.69 ಲಕ್ಷ ಕೋಟಿ ರೂ. ಆಗಿತ್ತು. 2023-24ರ ಸಾಲಿನಲ್ಲಿ 2.1 ಲಕ್ಷ ಕೋಟಿ ರೂ. ಹಾಗೂ 2022-23ರ ಸಾಲಿನಲ್ಲಿ 87,416 ಕೋಟಿ ರೂಪಾಯಿ ಲಾಭಾಂಶವನ್ನು ಕೇಂದ್ರಕ್ಕೆ ವರ್ಗಾಯಿಸಲಾಗಿತ್ತು. ಈ ಬಾರಿ ಜಾಗತಿಕವಾಗಿ ಹಲವು ಪ್ರತಿಕೂಲ ಸನ್ನಿವೇಶಗಳಿಂದ ಕೇಂದ್ರಕ್ಕೆ ಬರುತ್ತಿರುವ ಆದಾಯ ಒಳ ಹರಿವು ಕಡಿಮೆಯಾಗಿದೆ. ಇಂಥ ಸನ್ನಿವೇಶದಲ್ಲಿ ಆರ್‌ಬಿಐ ನೀಡಿರುವ ದಾಖಲೆ ಲಾಭಾಂಶ ಕೇಂದ್ರಕ್ಕೆ ಹೆಚ್ಚಿನ ಬಲ ನೀಡಿದೆ.

ಆರ್‌ಬಿಐ ಇತಿಹಾಸದಲ್ಲೇ ದಾಖಲೆ

ಗವರ್ನರ್ ಸಂಜಯ್ ಮಲ್ಹೋತ್ರಾ ಅವರ ಅಧ್ಯಕ್ಷತೆಯಲ್ಲಿ ನಡೆದ ಆರ್‌ಬಿಐನ ಕೇಂದ್ರೀಯ ನಿರ್ದೇಶಕರ ಸಭೆಯಲ್ಲಿ ಈ ಲಾಭಾಂಶ ಪಾವತಿ ನಿರ್ಧಾರವನ್ನು ಕೈಗೊಳ್ಳಲಾಗಿದೆ.

ಹಾಂಗ್ಯೋ ಉತ್ಪಾದನಾ ಘಟಕಕ್ಕೆ ಚಾಲನೆ

ತಿರುಪತಿ: ದಕ್ಷಿಣ ಭಾರತದ ಪ್ರಮುಖ ಐಸ್ ಕ್ರೀಮ್ ಬ್ರ್ಯಾಂಡ್‌ಗಳಲ್ಲಿ ಒಂದಾಗಿರುವ ಹಾಂಗ್ಯೋ ಐಸ್‌ಕ್ರೀಮ್ಸ್ ಪ್ರೈ.ಲಿ. ಆಂಧ್ರಪ್ರದೇಶದ ತಿರುಪತಿಯಲ್ಲಿ ತನ್ನ ಅತ್ಯಾಧುನಿಕ ಉತ್ಪಾದನಾ ಘಟಕವನ್ನು ಆರಂಭಿಸಿದೆ. ಇದಕ್ಕೆ ಗುರುವಾರ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಶ್ರೀಮದ್ ವಿದ್ಯಾಧೀಶತೀರ್ಥ ಸ್ವಾಮೀಜಿ ಚಾಲನೆ ನೀಡಿದರು.

''ಜನರನ್ನು ಸಬಲೀಕರಣಗೊಳಿಸುವ ಮತ್ತು ಮೌಲ್ಯಗಳೊಂದಿಗೆ ಕಾರ್ಯ ನಿರ್ವಹಿಸುವ ಉದ್ಯಮಗಳು ರಾಷ್ಟ್ರದ ಪ್ರಗತಿಗೆ ಅರ್ಥಪೂರ್ಣವಾಗಿ ಕೊಡುಗೆ ನೀಡುತ್ತವೆ. ಈ ನಿಟ್ಟಿನಲ್ಲಿ ಹಾಂಗ್ಯೋ ಸಾಧನೆ ಮಾದರಿಯಾಗಿದೆ,'' ಎಂದು ಸ್ತುತಿಸಿದರು.

ಆಂಧ್ರದ ಕೈಗಾರಿಕೆ,ವಾಣಿಜ್ಯ ಹಾಗೂ ಆಹಾರ ಸಂಸ್ಕರಣಾ ಖಾತೆ ಸಚಿವ ಟಿ.ಜಿ.ಭರತ್, ''ರಾಜ್ಯದಲ್ಲಿ ಹಾಂಗ್ಯೋ ಹೂಡಿಕೆಯನ್ನು ಶ್ಲಾಘಿಸಿದರು.

''ಹೊಸ ಘಟಕವು ನಿರಂತರ ನಾವೀನ್ಯತೆ, ರಾಜಿಯಾಗದ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತದೆ,'' ಎಂದು ಹಾಂಗ್ಯೋ ಐಸ್ ಕ್ರೀಮ್ಸ್ ಪ್ರೈ.ಲಿ. ಸ್ಥಾಪಕ ಮತ್ತು ಕಾರ್ಯನಿರ್ವಾಹಕ ಅಧ್ಯಕ್ಷ ದಿನೇಶ್ ಆರ್.ಪೈ ಹೇಳಿದರು.

ಆಂಧ್ರಪ್ರದೇಶದ ತಿರುಪತಿಯಲ್ಲಿ ಹಾಂಗ್ಯೋ ಐಸ್‌ಕ್ರೀಮ್ಸ್‌ನ ಉತ್ಪಾದನಾ ಘಟಕವನ್ನು ಗೋಕರ್ಣ ಪರ್ತಗಾಳಿ ಮಠದ ಶ್ರೀಮದ್ ವಿದ್ಯಾಧೀಶತೀರ್ಥ ಸ್ವಾಮೀಜಿ ಉದ್ಘಾಟಿಸಿದರು.

ಶಾಸಕ ಬೊಜ್ಜಲ ವೆಂಕಟ ಸುಧೀರ್ ರೆಡ್ಡಿ, ಆರಣಿ ಶ್ರೀನಿವಾಸುಲು, ಪುಲಿವರ್ತಿ ವೆಂಕಟಮಣಿ ಪ್ರಸಾದ್, ಗಾಲಿ ಭಾನು ಪ್ರಕಾಶ್, ಡಾ.ಕಲಿಕಿರಿ ಮುರಳಿ ಮೋಹನ್, ಸರಕಾರದ ಪ್ರಧಾನ ಕಾರ್ಯದರ್ಶಿ ಚಿರಂಜೀವ್ ಚೌಧರಿ, ಮುಂಬಯಿಯ ಫೇರಿಂಗ್ ಕ್ಯಾಪಿಟಲ್‌ನ ಸಹ-ಸಂಸ್ಥಾಪಕ ಸಮೀರ್ ಶ್ರಾಫ್, ಉದ್ಯಮಿ ಟಿ.ವಿ.ಮೋಹನ್‌ದಾಸ್ ಪೈ, ಪುರ್ಶೋಲಾನಾ ಗ್ರೂಪ್‌ನ ಸ್ಥಾಪಕ ಪ್ರಕಾಶ್ ಪೈ, ಟಾಟಾ ಪ್ರಾಜೆಕ್ಟ್‌ನ ವ್ಯವಸ್ಥಾಪಕ ನಿರ್ದೇಶಕ ವಿನಾಯಕ್ ಪೈ, ಆಕ್ಸಿಸ್ ಬ್ಯಾಂಕ್‌ನ ವ್ಯವಹಾರ ಮುಖ್ಯಸ್ಥ ಶೈಲೇಂದ್ರ ಶಿಧಾಯೆ, ಡಿಬಿಎಸ್ ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಸುಶಾಂತ್ ಶೆಟ್ಟಿ ಗೌರವ ಅತಿಥಿಗಳಾಗಿದ್ದರು.

ಹಾಂಗ್ಯೋ ಐಸ್ ಕ್ರೀಮ್ಸ್ ಪ್ರೈ.ಲಿ.ನ ಸ್ಥಾಪಕರಾದ ದಿನೇಶ್ ಆರ್.ಪೈ, ಪ್ರದೀಪ್ ಜಿ.ಪೈ, ಜಗದೀಶ್ ಆರ್.ಪೈ, ಉಪಾಧ್ಯಕ್ಷ ಕೆ.ಉಲ್ಲಾಸ್ ಕಾಮತ್ ಉಪಸ್ಥಿತರಿದ್ದರು.

ಇಂಡಕ್ಷನ್ ಕುಕ್‌ಟಾಪ್ ಸ್ಟೋವ್‌ಕ್ರಾಫ್ಟ್ ದಾಖಲೆ

ಬೆಂಗಳೂರು: ಅಡುಗೆ ಮನೆ ಹಾಗೂ ಗೃಹೋಪಯೋಗಿ ಉಪಕರಣ ಕಂಪನಿಗಳಲ್ಲಿ ಒಂದಾಗಿರುವ ಸ್ಟೋವ್‌ಕ್ರಾಫ್ಟ್ ಲಿಮಿಟೆಡ್ 2026, ಮಾರ್ಚ್ 31ಕ್ಕೆ ಕೊನೆಗೊಂಡ ನಾಲ್ಕನೇ ತ್ರೈಮಾಸಿಕದಲ್ಲಿ ಇಂಡಕ್ಷನ್ ಕುಕ್‌ಟಾಪ್‌ನಲ್ಲಿ ಶೇ.89.44ರಷ್ಟು ಬೆಳವಣಿಗೆ ಸಾಧಿಸಿದೆ.

ಇದು ಇಂಧನ ಸಾಮರ್ಥ್ಯ ಮತ್ತು ಹೆಚ್ಚು ಕಾರ್ಯಕ್ಷಮತೆ ಇರುವ ಅಡುಗೆ ಉಪಕರಣಗಳ ಬಗ್ಗೆ ಗ್ರಾಹಕರು ನೀಡುತ್ತಿರುವ ಆದ್ಯತೆಯನ್ನು ತೋರಿಸುತ್ತದೆ. ಈಗ ಇಂಧನ ದಕ್ಷತೆ ಪ್ರಮುಖ ಸಂಗತಿಯಾಗಿದೆ. ''ಇತ್ತೀಚೆಗೆ ಕಡಿಮೆ ಇಂಧನ ಬಳಸಿ ಅಡುಗೆ ಸಿದ್ಧಪಡಿಸಿಕೊಳ್ಳುವುದರ ಕಡೆಗೆ ಎಲ್ಲರೂ ಗಮನ ನೀಡಿದ್ದಾರೆ. ಇದು ಮುಂದಿನ ವರ್ಷಗಳಲ್ಲಿ ಅಡುಗೆ ಉಪಕರಣಗಳ ಸ್ವರೂಪವನ್ನು ಇನ್ನಷ್ಟು ಬದಲಿಸಿದೆ. ಬದಲಾದ ಅಗತ್ಯಗಳಿಗೆ ತಕ್ಕಂತೆ ನಾವು ಕೂಡ ಗೃಹೋಪಯೋಗಿ ವಸ್ತುಗಳನ್ನು ಮರು ರೂಪಿಸುತ್ತಿದ್ದೇವೆ,'' ಎಂದು ಸ್ಟೋವ್‌ಕ್ರಾಫ್ಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಗಾಂಧಿ ತಿಳಿಸಿದ್ದಾರೆ.

ಭೂ ಕುಸಿತ ದೇವರ ಕೃತ್ಯ ಎಂದ ಹೆದ್ದಾರಿ ಪ್ರಾಧಿಕಾರ

ಡೆಹ್ರಾಡೂನ್: ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ 2025ರ ಮೇ ತಿಂಗಳಲ್ಲಿ ಸಂಭವಿಸಿದ ಭೂಕುಸಿತವು 'ದೇವರ ಕೃತ್ಯ' ಆಗಿರುವುದರಿಂದ ಅಲ್ಲಿನ ಕೃಷಿ ಭೂಮಿ ಮಾಲೀಕರಿಗೆ ಪರಿಹಾರ ಪಾವತಿಸಲು ತಾನು ಬಾಧ್ಯಸ್ಥನಲ್ಲ ಎಂದು ರಾಷ್ಟ್ರೀಯ ಹಸಿರು ನ್ಯಾಯಪೀಠಕ್ಕೆ (ಎನ್‌ಜಿಟಿ) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹೇಳಿದೆ.

ಇಲ್ಲಿನ ಶಕ್ರಾಲ ಗ್ರಾಮದಿಂದ ಢಲ್ಲಿವರೆಗೆ ನಾಲ್ಕು ಪಥದ ರಸ್ತೆ ವಿಸ್ತರಣಾ ಯೋಜನೆಯಲ್ಲಿ ತೊಡಗಿರುವ 'ಎನ್‌ಎಚ್‌ಎಐ' ಮತ್ತು ಅಧೀನ ಸಂಸ್ಥೆಗಳ ವಿರುದ್ಧ ಕೆಲ ಭೂ ಮಾಲೀಕರು 2026ರ ಜನವರಿಯಲ್ಲಿ ಸಲ್ಲಿಸಿದ್ದ ಅರ್ಜಿಗೆ ಪ್ರಾಧಿಕಾರ ಈ ಉತ್ತರ ಸಲ್ಲಿಸಿದೆ.



''ಪ್ರಾಧಿಕಾರ ಮತ್ತು ಅದರ ಏಜೆನ್ಸಿಗಳು ಇಳಿಜಾರಿನ ಪ್ರದೇಶವನ್ನು ಸರಿಯಾಗಿ ಬಲ ಪಡಿಸದೆ, ಭಾರಿ ಪ್ರಮಾಣದ ನಿರ್ಮಾಣ ಕಾರ್ಯಗಳನ್ನು ಕೈಗೊಂಡಿದ್ದವು. ಇದರಿಂದ ಶಿಮ್ಲಾದ ಗ್ರಾಮೀಣ ಭಾಗದಲ್ಲಿ ಭೂ ಕುಸಿತ ಸಂಭವಿಸಿ, ಕೃಷಿ ಭೂಮಿಗೆ ಹಾನಿಯಾಗಿದೆ,'' ಎಂದು ಭೂ ಮಾಲೀಕರು ಅರ್ಜಿಯಲ್ಲಿ ದೂರಿದ್ದರು. ಇದಕ್ಕೆ ಪ್ರತಿಕ್ರಿಯೆ ಸಲ್ಲಿಸುವಂತೆ ಪ್ರಾಧಿಕಾರಕ್ಕೆ 'ಎನ್‌ಜಿಟಿ' ಸೂಚಿಸಿತ್ತು.

ತುಳಸಿ ಗಬ್ಬಾರ್ಡ್ ರಾಜೀನಾಮೆ

ವಾಷಿಂಗ್ಟನ್: ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಂಪುಟದಿಂದ ತುಳಸಿ ಗಬ್ಬಾರ್ಡ್ ಹೊರ ಬಿದ್ದಿದ್ದಾರೆ.

ಅಮೆರಿಕದ ರಾಷ್ಟ್ರೀಯ ಗುಪ್ತಚರ ಸಂಸ್ಥೆ ನಿರ್ದೇಶಕಿ ತುಳಸಿ ಗಬ್ಬಾರ್ಡ್ ವೈಯಕ್ತಿಕ ಕಾರಣ ನೀಡಿ ತಮ್ಮ ಹುದ್ದೆಗೆ ಶುಕ್ರವಾರ ರಾಜೀನಾಮೆ ನೀಡಿದ್ದಾರೆ.



ಶುಕ್ರವಾರ ಓವಲ್‌ನಲ್ಲಿ ನಡೆದ ಸಂಪುಟ ಸಭೆ ವೇಳೆ ತುಳಸಿ ರಾಜೀನಾಮೆ ಪ್ರಕಟಿಸಿದ್ದಾರೆ. ಜೂನ್ 30 ರಂದು ಅಧಿಕೃತವಾಗಿ ಗುಪ್ತಚರ ಸಂಸ್ಥೆ ನಿರ್ದೇಶಕಿ ಸ್ಥಾನ ತೊರೆಯಲಿದ್ದಾರೆ.

''ಕ್ಯಾನ್ಸರ್ ಪೀಡಿತ ಪತಿ ಅಬ್ರಹಾಂ ಅವರ ಆರೈಕೆ ಮಾಡಬೇಕಿದೆ. ಅವರಿಗೆ ಸಮಯ ನೀಡಬೇಕಿದೆ. ಕೆಲಸದ ಮೇಲೆ ಗಮನ ನೀಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ರಾಜೀನಾಮೆ ನೀಡುತ್ತಿರುವೆ,'' ಎಂದು ಭಾರತೀಯ ಮೂಲದ ಗಬ್ಬಾರ್ಡ್ ತಮ್ಮ ರಾಜೀನಾಮೆ ಪತ್ರದಲ್ಲಿ ಹೇಳಿದ್ದಾರೆ.

TIMES interact

Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ADMINISTRATION

MANAGERS

LOOKING for a lady Manager / Warden for a reputed Girls PG with 15 branches in Bangalore. Accomodation + food + salary + incentive. Contact no - 9945027274.

MARKETING, ADVERTISING & SALES

Tele Caller

"REQ. Experienced / Fresher Telecallers, Team Leaders, For Bank Loan collection. Salary + Incentive 7019700755 / 9620206754

MEDICAL

MEDICAL

ಬೇಕಾಗಿದ್ದಾರೆ ಮೆಡಿನೋವಾ ಹೆಲ್ತ್ ಕೇರ್ ಸರ್ವೀಸ್ ಸ್ಟಾಫ್ ನರ್ಸ್ ಪೇಷಂಟ್ ಕೇರ್ ಟೇಕರ್ ಬೇಬಿ ಕೇರ್ ಹಾಗೂ ಸೇವಕಿ ಬೇಕು. ಸಂ: 94823 35223. 93596 89132

OTHER VACANCIES

DRIVERS

30 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ, ಮಾನ್ಯ ಎಲ್‌ಎಂವಿ ಪರವಾನಗಿ ಹೊಂದಿರುವ ಅನುಭವಿ ಚಾಲಕ ಬೇಕಾಗಿದ್ದಾರೆ. ಕಂಪನಿ ಒಡೆತನದ ವಾಹನದಲ್ಲಿ ಕೆಲಸ ಮಾಡಲು. ಆಸಕ್ತ ಅಭ್ಯರ್ಥಿಗಳು ಮೊಬೈಲ್ ಸಂಖ್ಯೆ: 9901345791 ಅನ್ನು ಸಂಪರ್ಕಿಸಿ.ರಾಜಾನುಕುಂಟೆ ಮತ್ತು ಯಲಹಂಕ ಪ್ರದೇಶಗಳಿಗೆ ಆದ್ಯತೆ ನೀಡಲಾಗುವುದು.

TIMES TRIBUTE PAYING HOMAGE TO THE DEPARTED SOUL ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

GENERAL

ಕೆಲಸ ಖಾಲಿ ಇದೆ: ಕರ್ನಾಟಕದಾದ್ಯಂತ ಎಂಎನ್‌ಸಿ ಕಂಪನಿಗಳಾದ ಟಿವಿಎಸ್, ಬ್ರಿಟಾನಿಯಾ ಡೈರಿಗಳಿಗೆ ಹಾಗೂ ಆಫೀಸ್‌ಗಳಿಗೆ 7ನೇ, 10ನೇ, 12ನೇ ತರಗತಿ, ಐಟಿಐ, ಏನಿ ಡಿಗ್ರಿಯವರಿಗೆ ಬಂದ ದಿನವೇ ನೇರ ಆಯ್ಕೆ (ಮಾರ್ಕೆಟಿಂಗ್ ಅಲ್ಲ). ವಸತಿಯೂಟವಿರುತ್ತದೆ. ಸಂಬಳ: ರೂ. 15,000 - 46,000/- ಸಂಪರ್ಕಿಸಿ: 77608 35029

ರಾಜಾಜಿನಗರ 6ನೇ ಬ್ಲಾಕ್‌ನಲ್ಲಿರುವ ಆಫೀಸಿಗೆ 10ನೇ ತರಗತಿವರೆಗೆ ಓದಿರುವ ಸಹಾಯಕಿ ಹುಡುಗಿ ಬೇಕಾಗಿದ್ದಾರೆ. ರಾಜಾಜಿನಗರ 6ನೇ ಬ್ಲಾಕ್‌ನ ಸುತ್ತ ಮುತ್ತ ಇರುವವರಿಗೆ ಆದ್ಯತೆ ಸಂಪರ್ಕಿಸಿ: ಸುದರ್ಶನ್ ಗ್ರೂಪ್, 6ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು-10. ರಂಜನ್ ಮೊ – 8884870791

OFFICE ADMINISTRATOR: Graduate, age group-30+ required for a firm in Chamrajpet, Bengaluru for invoicing, filing, documentation, followup works and other related clerical jobs. To have good computer knowledge and experience in ERP. Call : 080-26603729 for an interview. E-mail: admin@mahendra perfumery.com

ಬೇಕಾಗಿದ್ದಾರೆ: ಡ್ರೈವರ್ಸ್ 25 ರಿಂದ 45 ವರ್ಷ, ಸರ್ಕಾರಿ ಕಚೇರಿಗೆ 18000/- ಸಂಬಳ, ESI ಹಾಗೂ PF ಇರುತ್ತದೆ. ಬೆಂಗಳೂರು ಗಾಂಧಿನಗರ ಸುತ್ತಮುತ್ತ ಆದ್ಯತೆ. ಸಂಪರ್ಕಿಸಿ: 9164993307

TECHNICAL

ENGINEERS

CALIBRE UPS, Inverters & Batteries Near Yeshwanthpur Requires, Technicians with ITI/ Diploma Electrical/ Electronics, Male SSLC for Field work Contact: 9845034531

JOB WANTED

WANTED Helpers & Sales Man for Ready made Blouse Show Room in Chickpet Age: 18-35 in Showroom activities Manoj Bafna Call: 9448121073

ಆಸ್ತಿಗಳು PROPERTY

BANGALORE PROPERTIES

BASAVESHWARA NAGAR

Basaveshwaranagar Sale Semi furnished Flats with Car Parking/ Lift/ Power backup. 2BHK 1320 sqft 1.20 Crores, 3BHK 1759 sft 1.55 Crores. Call: 9845140190/ 9632227400

FOR SALE

BANGALORE

SALE 30×40 INDEPENDENT 4BHK BDA MICO LAYOUT NORTH FACING,40 FT WIDE ROAD NEAR L AND T APARTMENTS CONTACT OWNER 9243107577

ವ್ಯಾಪಾರ BUSINESS

BUSINESS OFFERS

ಕೆಂಗೇರಿಬಳಿಇರುವನೂತನಕಲ್ಯಾಣಭವನವುಬಾಡಿಗೆಗೆ / ರೆವಿನ್ಯೂಹಂಚಿಕೆಮಾಡಲ್ ಮೇಲೆಲಭ್ಯವಿದೆ.ಮದುವೆಹಾಲ್ ನಲ್ಲಿದೊಡ್ಡಸ್ಟೇಜ್, 600 ಜನರಿಗೆಕುರ್ಚಿಗಳು, ಊಟದಹಾಲ್ ನಲ್ಲಿ 400 ಜನರಿಗೆಕುಳಿತುಕೊಳ್ಳಲುವ್ಯವಸ್ಥೆಇದೆ.ಆಧುನಿಕಅಡುಗೆಮನೆ, ಬಫೆಗಾಗಿಪ್ರತ್ಯೇಕಜಾಗ,ಜನರೇಟರ್, ಹಾಗು 200 ಕಾರ್ ಗಳಿಗೆಪಾರ್ಕಿಂಗ್ ಹಾಗು 15 ಕೊಠಡಿಗಳನ್ನುಕೂಡಹೊಂದಿದೆ. ಆಸಕ್ತಿಯುಳ್ಳವರುಭೇಟಿನೀಡಲುಸಂಪರ್ಕಿಸಬಹುದು. 9711392402, 9632919195

FOR SALE

BUSINESS for Sale in Uttarahalli, Manufacturing unit of Snacks & Savories running business incl goodwill & customers. All machines are 1yr old & excellent condition. Price 12L (Neg). Cont: 8884253229

ಪ್ರವಾಸ TRAVEL

PACKAGE TOURS

ಶ್ರೀ ಮಹದೇಶ್ವರ ಟೂರ್ಸ್ & ಟ್ರಾವೆಲ್ಸ್, 10 ದಿನಗಳ ಅಮರನಾಥ ಯಾತ್ರೆ, 14 ದಿನಗಳ ಚಾರ್ಧಮ್ ಯಾತ್ರೆ. ಸಂಪರ್ಕಿಸಿ: 9611801143, 9742810701.

TOURS & TRAVELS

24-05-26 1 ದಿನ ಸಿದ್ದಗಂಗೆ, ದೇವರಾಯನ ದುರ್ಗ, ಗೊರವನಹಳ್ಳಿ 17-6-26 5 ದಿನ ಶ್ರೀರಂಗಂ, ಪಳನಿ ರಾಮೇಶ್ವರಂ, ಕನ್ಯಾಕುಮಾರಿ ಇತ್ಯಾದಿ ಶ್ರೀವಿನಾಯಕ ಟ್ರಾವೆಲ್ಸ್9972500645

personal

CHANGE OF NAME

I Asif S/o Dasthagir R/o #511, 3rd Cross, Begur Main Road Virat Nagar Bommanahalli B'lore-560068 have changed my name to Mohammed Asif.

ನಾನು ರಿಯಾ ಜೆ ಕುನ್ನಿಭಾವಿ, ತಂದೆಯ ಹೆಸರು ಜಾವೇದ್ ಕುನ್ನಿಭಾವಿ, ಇನ್ನುಮುಂದೆ ನನ್ನ ಹೆಸರನ್ನು ರಿಯಾ ಜಾವೇದ್, ಎಂದು ಬದಲಾಯಿಸಿಕೊಂಡಿದ್ದು , ಮುಂದಿನ ಎಲ್ಲಾ ದಾಖಲೆಗಳು ಹಾಗೂ ಉದ್ದೇಶಗಳಿಗಾಗಿ ರಿಯಾ ಜಾವೇದ್ (Rhea Javed) ಎಂಬ ಹೆಸರಿನಿಂದಲೇ ಗುರುತಿಸಲ್ಪಡುವೆನು.

I, Adithi Kumari B, residing at No 14, 1st A cross Hanumanthappa layout, Hesarghatta main road Hurulichkkanahalli, Chikkabanavara, PO: Chikkabanavara, DIST: Bengaluru, Karnataka - 560090, state that my mother's name is incorrectly recorded as Savitha Kumari in my 10th and 12th educational records. Her actual correct legal name is Savitha Devi as per the affidavit dated 13-04-2026 sworn before notary Chidananadappa Ramanna Hospar.

I, Manjunath Rao Nagesh R/o 19/64, 8th Main, 4th Block, Rajajinagar, Bengaluru-560010 have changed my minor daughter's name from Neeharika Pawar to Sohni Pawar for all purposes

I Mahesha M.C. S/o Chandrappa Gowda aged about 54 years residing at No.49, 3rd Main Road, Vyalikaval Malleshwaram Bangalore-560003, have changed my name to MAHESH M.C. vide affidavit dated 22/05/2026 sworn before notary S.R. Paramashivaiah

I, Rashmita wife of No 13759187F Rank Ex Hav (Clk SD) Name Nepal Chhatria presently residing at B-19, Income Tax Colony, Jalahalli West, Bengaluru-560013, have changed my name from Rashmita to Rashmita Chhatria for all future purposes vide affidavit dated 23-02-2026 before Notary Public K C Pemmaiah, B'lore.

WE, PRASHANTH P. (Father) PREETHI K.N.(Mother) residing at No.996, Chiguru, Bharathnagar 2nd Stage, 6th Cross, 3rd Main, Vishwaneedam Post, Bangalore -560091, have changed our Son's Name From DHIPIN P (Old Name) to ROHANSH KRISHI (New Name) vide affidavit dated: 22/5/2026 Before Notary M.K.Devaki Bangalore.

ಎಚ್ಚರಿಕೆ ನೋಟೀಸು

ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

I, Ragalela Padmanabham R/o 6/2/266-20 2nd Floor behind Sai Baba temple Kovvuru Nagar Anantapur-515001 have changed my name to Ragalela Padmanaba.

I Ramamani Tharikeri Satyanarayana R/o No 2032/81 SMV Lyt 5th Block Ullalu Main Road Blore-56 Have Changed My Name To Ramamani Markandeya.

I, Nishu G w/o Gagan R, R/o No-151, 5th Cross,, K V Layout, Near Sai Baba Temple, K R Puram, Bengaluru-560036 have changed my name to Nishchala Girish for all Purposes.

I, Amit Omprakash Kolariya S/O Omprakash Kolariya, R/O 303,36th A Cross, 11th Main, Jayanagar 4th T block, Bangalore, have changed my name to Amit Kolariya vide affidavit dated 11/05/2026.

I FATIMA ZUHA, R/O DARUL MOHTESHAM, SALMAN ABAD ROAD, POST BHATKAL, HAVE CHANGED MY NAME FROM FATHIMA ZUHA TO FATIMA ZUHA FOR ALL FUTURE PURPOSES

I, Mohamed Huseni Nabi Rasul Dakhani S/O Nabi Rasul Khan Mohamed Dakhani R/o Ft 407 Favourite Elegance Apt Shampur Main Rd Kavalbyrasndra Bangalore-32 have changed my name to Mohamed Hussain N Dakhani .

I, Pandia Raj Ramakrishna, R/at No. 95, J Street, Keshava Nagar, K P Agrahara, Magadi road, Bengaluru - 580023, have changed my name to Pandiya Raj Ramakrishna, vide affidavit dt: 19/05/2026 Notary V Anjanappa, B.lore.

I, PRAJWAL N (Old Name) aged about 27 years, S/o H Nagaraj, residing at No.1587, Near Ullal BDA Park, 5th Block, SMV Layout, Ullalu Upanagar, Bengaluru-560110, have changed my name to PRAJWAL GOWDA (New Name) vide affidavit dated: 21/5/2026 Before Notary M.K.Devaki Bangalore.

I, Qamarunissa Amanulla Baiganpalli W/O Amanulla Hashamali Baiganpalli 207 Ground floor 5th cross S.K.Garden Billawardhalli Bannerghatta post 560083 i have changed my name from Qamarunnisa sindgi to Qamarunissa Amanulla Baiganpalli vide sworn before notary Mohammed Hussain K dt 12.05.2026

I am Leelavati Ashok Kannappalavar W/o Ashok B K, r/o Haveri, I have changed my name from Leelavati Kannappalavar to Leelavati Ashok Kannappalavar

I, Sathyavani Pratap Johnny Suresh W/O, Pratap Johnny Suresh R/o #182/A, S.G. Palya 5th Cross Rd, Venkateshwara Layout,B'luru-560029 have changed my name to Sathyavani Pratap for all purposes

I, NALINI, D/o 13681394Y Ex Hav BB POOVANNA, R/at 132, 7th main 4th Block, Basaveswaranagar, Bangalore-560079, have changed my name NALINI B, vide affidavit dt : 15.11.2025, For all purpose.

I, RASHEED KHAN BABU residing at No. 1450, Qumar Nagar, Chandra Layout, Bangalore – 560072 have changed my name to BABU KHAN vide affidavit dated 05/05/2026 sworn before notary Leela Bangalore

I, Lokesha Kammasandra Venkataramaiah, R/at No. 17/A, B H road, Someshwara Extension, Magadi Town, Ramanagar-562120, have changed my name to Lokesh Kammasandra Venkataramaiah, vide affidavit dt: 12/05/2026 Notary V Anjanappa, B.lore.

I, Mr. Natesan Damodaran, S/o Natesan, Ex-Army No. 1341723, R/o No. 52, 3rd Main Road, Near Gangamma Temple, Gangamma Temple Layout, New Extension, K.R. Puram, Bangalore - 560036, hereby declare that my wife's name recorded as "VANITHA" in Army records is corrected as "D VANITHA" for all purposes.

I, Sreedharan Potty Sreekanth born on 13/03/1978 holder of Passport no. K3834369 residing at 103, Sunny Acura, Owners Court East, Hosa Road, Kasavanhalli, Bengaluru, Karnataka - 560035, have changed my name to Sreedharan Sreekanth vide affidavit dated 20/05/2026 at Bengaluru.

I, CHAITRA PRAJWAL (Old Name) aged about 26 years W/o Prajwal Gowda, residing at No.1587, Near Ullal BDA Park, 5th Block, SMV Layout, Ullalu Upanagar, Bengaluru-560110, have changed my name to CHAITRA GOWDA (New Name) vide affidavit dated: 21/5/2026 Before Notary M.K.Devaki Bangalore.

I, DEVIKA J D/o. Jayaseelan, residing at Flat #201, 2nd Floor, Sri Lakshmi Balaji Residency, Block-A, 10th Cross, Vinayaka Nagar, Annasandra Palya Extension, HAL Post, Bengaluru 560017 have changed my name to DEVIKA vide affidavit dated 22.05.2026 sworn before notary Meer Hassan, Bangalore.

I, SWATHI, D/o 13681394Y Ex Hav BB POOVANNA, R/at 132, 7th main 4th Block, Basaveswaranagar, Bangalore-560079, have changed my name SWATHI B P, vide affidavit dt : 15.11.2025, For all purpose.

LOST & FOUND

I, ALLWIN residing at No. 0571, Joga street, Near Nageshwara Temple, Begur, Bangalore – 560068 have lost my RTC documents (Sale deed No. 28203) in Begur on 17/05/2026. If anybody find please handover to the nearest Police Station or above mentioned address.

MISSING

ಕಾಣೆಯಾಗಿದ್ದಾರೆ



ಹೆಸರು:ತಿರುಜ್ಞಾನಸಂಮಂಧಂ

ಇವರಿಗೆ 81 ವರ್ಷ ವಯಸ್ಸಾಗಿದ್ದು ಕಳೆದ 19/5/2026 ಮಂಗಳವಾರ ದಂದು ಮಾರುತಿ ಸೇವಾನಗರದ ನಮ್ಮ ಮನೆಯಿಂದ ಮಧ್ಯಾಹ್ನ 1 ಗಂಟೆಯಿಂದ ಕಾಣೆಯಾಗಿದ್ದಾರೆ ನೀಲಿ ಕಲ್ಲರ್ ಅಂಗಿಯನ್ನು ಹಾಕಿದ್ದಾರೆ, ಇವರನ್ನು ಕಂಡವರು ಕೆಳಗಿನ ಫೋನ್ ನಂಬರ್‌ಗೆ ಕರೆಮಾಡಿ ಅಥವಾ ಪೋಲೀಸ್ ಸ್ಟೇಷನ್‌ಗೆ ತಿಳಿಸಬೇಕಾಗಿ ವಿನಂತಿ.

ಇವರನ್ನು ಹುಡುಕಿಕೊಟ್ಟವರಿಗೆ ಸನ್ಮಾನ ಮಾಡಲಾಗವುದು.

ಸಂಪರ್ಕಿಸಿ:
9900931979
9845197334

GALLERIA

GET NOTICED

Bennett & Coleman
THE TIMES OF INDIA
www.vijaykarnataka.com
ನಾಗೇಂದ್ರ ಶಾಸ್ತ್ರಿ ಸಂಗಡಿಗರಿಂದ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಜತೆಗೆ ಮಾಗಡಿ ಜಡೆದೇವರ ಮಠದ ಬಸವರಾಜೇಂದ್ರ ಸ್ವಾಮಿ ಸಾನ್ನಿಧ್ಯದಲ್ಲಿ ಪೂಜಾ ಕಾರ್ಯಕ್ರಮ ಮತ್ತು ಪಾದ ಪೂಜೆ ನಡೆಯಲಿದೆ.

ಮೇ 23ರ ಶನಿವಾರ ರಾತ್ರಿ 7.30 ರಿಂದ ಬಿ. ಟಿ. ರಘುನಾಥ್ ರೆಡ್ಡಿ ಸಾರಥ್ಯದಲ್ಲಿ ದೀಪಿಕಾ ಮೆಲೋಡೀಸ್ ವತಿಯಿಂದ ಸಂಗೀತ ರಸಮಂಜರಿ ಕಾರ್ಯಕ್ರಮ, ಸಂಜೆ 4 ಗಂಟೆಗೆ ರಂಗೋಲಿ ಸ್ಪರ್ಧೆ ನಡೆಯಲಿದೆ. ಮೇ 24 ರ ಭಾನುವಾರ ಬೆ. 8ರಿಂದ ಶಾಸ್ತ್ರಸಾಯಿ ಭಕ್ತ ವೃಂದದಿಂದ ಭಜನೆ ಕಾರ್ಯಕ್ರಮ, ಪರಿಸರ ಪ್ರೇಮಿ ರಾಜು ಬಿ. ಎಚ್. ಅವರಿಗೆ ಪ್ರಶಸ್ತಿ ಪ್ರದಾನ ಹಾಗೂ ಸನ್ಮಾನ ಕಾರ್ಯಕ್ರಮ, ಮಧ್ಯಾಹ್ನ 3ರಿಂದ ಡಾ. ವೀರೇಶ್ ಲಿಂಗದವೀರರ ಭದ್ರಕಾಳಿ ಕುಣಿತ, ಡೊಳ್ಳು ಕುಣಿತ ಹಾಗೂ ಮಂಗಳವಾದ್ಯಗಳೊಂದಿಗೆ ಡಿಸೋಜನಗರದ ರಾಜಬೀದಿಗಳಲ್ಲಿ ಭದ್ರಕಾಳಿ ಸಮೇತ ವೀರಭದ್ರೇಶ್ವರ ದೇವರ ಅದ್ದೂರಿ ಮೆರವಣಿಗೆ ಮತ್ತು ಮಹಿಳೆಯರಿಂದ ಕೋಲಾಟ ಕಾರ್ಯಕ್ರಮ ನಡೆಯಲಿದೆ. ರಾತ್ರಿ 8 ಗಂಟೆಗೆ ದೇವಸ್ಥಾನದ ಮುಂಭಾಗದಲ್ಲಿ ಭದ್ರಕಾಳಿ ಮಂಡಲ ನೃತ್ಯ ಏರ್ಪಡಿಸಲಾಗಿದೆ ಎಂದು ವರಸಿದ್ಧಿ ವಿನಾಯಕ ಸೇವಾ ಸಮಿತಿ ಟ್ರಸ್ಟ್ ಅಧ್ಯಕ್ಷ ಪಿ.ಎನ್. ಗಣೇಶ್ ಮತ್ತು ಟ್ರಸ್ಟ್ ಸದಸ್ಯರು ತಿಳಿಸಿದ್ದಾರೆ.

ಏಳುಮಂಧ್ಯಮ್ಮ ಜಾತ್ರಾ ಮಹೋತ್ಸವ

ಬೆಂಗಳೂರು: ಹೆಬ್ಬಾಳದ ಆನಂದನಗರದ ಚೌಡೇಶ್ವರಸ್ವಾಮಿ, ಮುನೇಶ್ವರಸ್ವಾಮಿ, ಗ್ರಾಮದೇವತೆ ಏಳುಮಂಧ್ಯಮ್ಮ,

ರಕ್ತಕಾಟೇರಮ್ಮದೇವಿ ಜಾತ್ರಾ ಮಹೋತ್ಸವಕ್ಕೆ ಚಾಲನೆ ಸಿಕ್ಕಿದ್ದು, ಭಾನುವಾರದವರೆಗೆ ನಡೆಯಲಿದೆ.

ಶನಿವಾರ ಗಣಪತಿ ಪೂಜೆ, ಪುಣ್ಯಾಹವಾಚನ, ನವಗ್ರಹ, ಅಷ್ಟದಿಕ್ಪಾಲಕ ಪೂಜೆ, ಅಮ್ಮನವರಿಗೆ ಪಂಚಾಮೃತ ಅಭಿಷೇಕ, ಗಣ ಹೋಮ, ವಾಸ್ತು ಹೋಮ, ನವಗ್ರಹ ಹೋಮ ನಡೆಯಲಿದೆ. ಭಾನುವಾರ ಅಮ್ಮನವರಿಗೆ ಹಾಗೂ ಮುನೇಶ್ವರ ಸ್ವಾಮಿಯವರಿಗೆ ಮಹಾರುದ್ರಾಭಿಷೇಕ, ರುದ್ರ ಹೋಮ, ನವದುರ್ಗಾ ಹೋಮ ನಡೆಯಲಿದೆ. ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ಹಾಗೂ ಅನ್ನಸಂತರ್ಪಣೆ, ರಾತ್ರಿ 9ಕ್ಕೆ ದೇವರ ಕರಗ ಮಹೋತ್ಸವ ನಡೆಯಲಿದೆ ಎಂದು ಗ್ರಾಮದೇವತೆ ಏಳುಮಂಧ್ಯಮ್ಮ ಸೇವಾ ಸಮಿತಿ ಟ್ರಸ್ಟ್ ತಿಳಿಸಿದೆ.

ಸ್ಥಳ: ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆವರಣ, ಆನಂದನಗರ, ಹೆಬ್ಬಾಳ.

ಕಸಂಸ ಪ್ರಶಸ್ತಿಗೆ ದು.ಸರಸ್ವತಿ, ಸದಾಶಿವಯ್ಯ ಜರಗನಹಳ್ಳಿ ಆಯ್ಕೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ 2026ನೇ ಸಾಲಿನ ಡಾ. ಅನುಪಮಾ ನಿರಂಜನ ಪ್ರಶಸ್ತಿಗೆ ಬರಹಗಾರ್ತಿ ದು. ಸರಸ್ವತಿ ಹಾಗೂ ಡಾ. ಕೋ.ವೆಂ. ರಾ. ಕನ್ನಡ ಪರಿಚಾರಕ ಪ್ರಶಸ್ತಿಗೆ ಕನ್ನಡ ಕಾರ್ಯಕರ್ತ ಆರ್. ಸದಾಶಿವಯ್ಯ ಜರಗನಹಳ್ಳಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ತಲಾ ಐದು ಸಾವಿರ ರೂ. ನಗದು, ಪ್ರಶಸ್ತಿ ಪತ್ರ ಹಾಗೂ ಫಲಕ ಒಳಗೊಂಡಿದೆ. ಜೂ.14ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕರ್ನಾಟಕ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷೆ ಎಚ್.ಎಲ್. ಪುಷ್ಪಾ, ಕನ್ನಡ ಹೋರಾಟಗಾರ ರಾಮಣ್ಣ ಎಚ್. ಕೋಡಿಹೊಸಹಳ್ಳಿ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಎಲ್ಲಿ-ಏನು?
ಶನಿವಾರ

ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್: 11ನೇ ರಾಷ್ಟ್ರೀಯ ನೃತ್ಯ ಕಲಾ ಮೇಳ ಹಾಗೂ 75ನೇ ರಾಜ್ಯಮಟ್ಟದ ಸಾಂಸ್ಕೃತಿಕ ಕಲಾ ಪ್ರತಿಭೋತ್ಸವ.

ಸ್ಥಳ: ಸಂಸ ರಂಗಮಂದಿರ, ರವೀಂದ್ರ ಕಲಾಕ್ಷೇತ್ರ. ಸಂಜೆ 4ರಿಂದ 9.30ರವರೆಗೆ.

ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ: ಗಮಕ ವಾಚನ ಹಾಗೂ ವ್ಯಾಖ್ಯಾನ. ಕೃತಿ: ಕುಮಾರವ್ಯಾಸ ಭಾರತದ ವಿರಾಟಪರ್ವದ 'ಉತ್ತರನ ಪೌರುಷ'. ವಾಚನ : ಎನ್. ಶ್ರೀಮತಿ ಜಯರಾಮ್. ವ್ಯಾಖ್ಯಾನ : ವಿ.ಭಾಗ್ಯಲಕ್ಷ್ಮಿ ಸುಬ್ರಹ್ಮಣ್ಯ.

ಸ್ಥಳ: ಎಂಇಎಸ್‌ಬಿ.ಎಲ್. ಸುಬ್ಬರಾವ್ ಪದವಿಪೂರ್ವ ಕಾಲೇಜು, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ. ಸಂಜೆ 5.

70ಕ್ಕೂ ಹೆಚ್ಚು ಬೋಗಸ್ ಕಂಪನಿಗಳ ಪಾತ್ರ | ನಕಲಿ ಇನ್‌ವಾಯ್ಸ್ ಸೃಷ್ಟಿಸಿ ನೂರಾರು ಕೋಟಿ ರೂ. ವರ್ಗಾವಣೆ

420 ಕೋಟಿ ವಂಚನೆ: ಇಡಿ, ಡಿಆರ್‌ಐ ತನಿಖೆ ಉರುಳು

■ **ವಿಕ ಸುದ್ದಿಲೋಕ** ಬೆಂಗಳೂರು

ವಾಣಿಜ್ಯ ತೆರಿಗೆ ಇಲಾಖೆಯು ಇತ್ತೀಚೆಗೆ ಬಯಲಿಗೆಳೆದಿದ್ದ 2,384 ಕೋಟಿ ರೂ.ಗಳ ವಹಿವಾಟಿನಲ್ಲಿ ನಡೆದಿದ್ದ ಸುಮಾರು 420 ಕೋಟಿ ರೂ. ನಕಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚಿಸಿದ ಆರೋಪಿಗಳಿಗೆ ಜಾರಿ ನಿರ್ದೇಶನಾಲಯ ಹಾಗೂ ಕಂದಾಯ ಗುಪ್ತಚರದ ತನಿಖೆ ಸಂಕಷ್ಟ ನಿಚ್ಚಳವಾಗಿದೆ.

ಸಲೀಂ ಉಲ್ಲಾ ಬೇಗ್

ಹಸ್ಸೆನ್ ಬೇಗ್

ಮೆಸರ್ಸ್ ಎಸ್‌ಕೆಎಸ್ ಟ್ರೇಡರ್ಸ್ ಕಂಪನಿ ಹಾಗೂ ಕೆ.ಎಚ್. ವೇಸ್ಟ್ ರೀಸೈಕಲ್ ಕಂಪನಿಗಳ ವಿರುದ್ಧದ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ತನಿಖೆಯಲ್ಲಿ ನೂರಾರು ಕೋಟಿ ರೂ.ಅಕ್ರಮ ಹಣ ವರ್ಗಾವಣೆ ನಡೆದಿರುವುದು ಕಂಡು ಬಂದಿದೆ. ಎರಡೂ ಕಂಪನಿಗಳು ಸುಮಾರು 70ಕ್ಕೂ ಹೆಚ್ಚು ಬೋಗಸ್ ಕಂಪನಿಗಳ ಹೆಸರಲ್ಲಿ ಕೋಟಿಗಟ್ಟಲೆ ವಹಿವಾಟು ನಡೆಸಿವೆ. ಈಗಾಗಲೇ 30ಕ್ಕೂ ಹೆಚ್ಚು ಕಂಪನಿಗಳ ವಹಿವಾಟು ಸ್ಥಗಿತಗೊಳಿಸಲಾಗಿದೆ. ಉಳಿದ ಕಂಪನಿಗಳ ರೂವಾರಿಗಳನ್ನು ಪತ್ತೆ ಹಚ್ಚಿ ನೋಟಿಸ್ ನೀಡಲು ತನಿಖಾ ತಂಡ ಸಿದ್ಧತೆ ನಡೆಸಿದೆ.

ಎರಡೂ ಕಂಪನಿಗಳು ಮಹಾರಾಷ್ಟ್ರ, ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ವ್ಯಾಪಾರ ವಹಿವಾಟು ಹೊಂದಿವೆ. ಪ್ರಸಿದ್ಧ ಉದ್ಯಮಿಗಳು, ರಾಜಕಾರಣಿಗಳ ಸಹಕಾರದಲ್ಲಿ ಆರೋಪಿಗಳು 420 ಕೋಟಿ ರೂ. ಬೃಹತ್ ವಂಚನೆ ಎಸಗಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ. ಅಕ್ರಮದಲ್ಲಿ ಭಾಗಿಯಾದ ಕಂಪನಿಗಳು ಕೆಲವೇ ದಿನಗಳಲ್ಲಿ ತಮ್ಮ ಖಾತೆಗಳಲ್ಲಿ ಹಣ ಡ್ರಾ ಮಾಡಿ,ಬೇರೆಡೆ ವರ್ಗಾಯಿಸಿವೆ. ಈ ನಿಟ್ಟಿನಲ್ಲಿ ತೆರಿಗೆ ವಂಚನೆ ಮಾತ್ರವಲ್ಲದೆ ಅಕ್ರಮ ಹಣಕಾಸು ವರ್ಗಾವಣೆ ಸಂಬಂಧವೂ ತನಿಖೆ ಅಗತ್ಯ ಕಂಡು ಬಂದಿದೆ. ಈ ನಿಟ್ಟಿನಲ್ಲಿ ತನಿಖಾಧಿಕಾರಿಗಳು ಇಡೀ ಅಕ್ರಮದ ಕುರಿತು ಇ.ಡಿ.ಗೆ ವರದಿ ನೀಡಲು ಸಿದ್ಧತೆ ನಡೆಸಿದ್ದಾರೆ.

ಅಷ್ಟೇ ಅಲ್ಲದೆ, ಹಳೆಯ ರಬ್ಬರ್ ಟೈರ್‌ಗಳ ವ್ಯವಹಾರದಲ್ಲಿ ಸುಂಕ (ತೆರಿಗೆ) ವಂಚನೆ ತನಿಖಾ ವ್ಯಾಪ್ತಿ ಕಂದಾಯ ಗುಪ್ತಚರ ನಿರ್ದೇಶನಾಲಯಕ್ಕಿದೆ. ಹೀಗಾಗಿ, ಡಿಆರ್‌ಐಗೂ ಪತ್ರ ಬರೆಯಲು ತೀರ್ಮಾನಿಸಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಈ ನಿಟ್ಟಿನಲ್ಲಿ ಇ.ಡಿ. ಹಾಗೂ ಡಿಆರ್‌ಐ ಕೆಲವೇ ದಿನಗಳಲ್ಲಿ ರಂಗಪ್ರವೇಶ ಮಾಡಲಿದ್ದು, ಪ್ರಮುಖ ಆರೋಪಿಗಳಾದ ಸಲೀಂ ಉಲ್ಲಾ ಬೇಗ್ (49), ಹಸ್ಸೆನ್ ಬೇಗ್ (35) ಜತೆ ನಂಟಿರುವ ಹಲವು ಗಣ್ಯರಿಗೂ ತನಿಖೆ ಬಿಸಿ ತಟ್ಟಲಿದೆ ಎನ್ನಲಾಗುತ್ತಿದೆ.

ಮೂರು ರಾಜ್ಯಗಳ ಸಂಪರ್ಕದ ಬೃಹತ್ ವಂಚನಾ ಜಾಲ

ತೆರಿಗೆ ಅಧಿಕಾರಿಗಳ ಶಾಮೀಲು ಶಂಕೆ?

ಕಂಪನಿಗಳ ಐಟಿಸಿ ವಂಚನೆಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಕೆಲವು ಅಧಿಕಾರಿಗಳು ಶಾಮೀಲಾಗಿರುವ ಶಂಕೆಯಿದ್ದು, ಈ ಕುರಿತು ಆಂತರಿಕ ತನಿಖೆ ನಡೆಯುತ್ತಿದೆ. ವಂಚಕ ಕಂಪನಿಗಳು ಸಲ್ಲಿಸುತ್ತಿದ್ದ ನಕಲಿ ಐಟಿಸಿಗಳನ್ನು ಪರಿಶೀಲಿಸದೆ ಕೆಲವು ಅಧಿಕಾರಿ/ಸಿಬ್ಬಂದಿ ಅನುಮೋದನೆ ನೀಡಿದ್ದಾರೆ. ಇದಕ್ಕೆ ಕಿಕ್‌ಬ್ಯಾಕ್ ಪಡೆದುಕೊಂಡು ಸಹಕಾರ ನೀಡಿರುವ ಆರೋಪವಿದೆ. ಇದರ ಸತ್ಯಾಸತ್ಯತೆ ಬಯಲಿಗೆ ಎಳೆಯಲು ವಿಶೇಷ ತನಿಖಾ ತಂಡ ರಚಿಸಲಾಗಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆ ಉನ್ನತ ಮೂಲಗಳು ತಿಳಿಸಿವೆ.

ಬೃಹತ್ ವಂಚನೆ ಭೇದಿಸಿದ ಆಯುಕ್ತರ ತಂಡ: ಪಶ್ಚಿಮ ವಿಭಾಗದಲ್ಲಿ ಕಾರ್ಯಚಟುವಟಿಕೆ ನಡೆಸುತ್ತಿರುವ ಮೆಸರ್ಸ್ ಎಸ್‌ಕೆಎಸ್ ಟ್ರೇಡರ್ಸ್ ಹಾಗೂ ಕೆ.ಎಚ್. ವೇಸ್ಟ್ ರೀಸೈಕಲ್ ಕಂಪನಿಗಳು ನಕಲಿ ಐಟಿಸಿ ಸೃಷ್ಟಿಸಿ ಭಾರೀ ಪ್ರಮಾಣದಲ್ಲಿ ಸರಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿರುವ ಬಗ್ಗೆ ಮಾಹಿತಿ ಸಿಕ್ಕಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಇಲಾಖೆಯ ವಿಜಿಲೆನ್ಸ್ ಹೆಚ್ಚುವರಿ ಆಯುಕ್ತರಾದ ಕನಿಷ್ಕ ಶರ್ಮಾ ಹಾಗೂ ಅಪರ್ಣಾ ರಮೇಶ್ ನೇತೃತ್ವದ ಪ್ರತ್ಯೇಕ ತಂಡಗಳು ಗುಪ್ತ ತನಿಖೆ ಕೈಗೆತ್ತಿಕೊಂಡಿದ್ದವು.

ತನಿಖೆಯಲ್ಲಿ ಮೆಸರ್ಸ್ ಎಸ್‌ಕೆಎಸ್ ಟ್ರೇಡರ್ಸ್ ಕಂಪನಿಯು ಸುಮಾರು 2,172 ಕೋಟಿ ರೂ.ಗಳ ಅನುಮಾನಾಸ್ಪದ ವಹಿವಾಟಿಗೆ ಸಂಬಂಧಿಸಿ 382 ಕೋಟಿ ರೂ.ಗಳ ನಕಲಿ ಐಟಿಸಿ ಪಡೆದಿರುವುದು ಗೊತ್ತಾಗಿತ್ತು. ಕೆ.ಎಚ್. ವೇಸ್ಟ್ ರೀಸೈಕಲ್ ಕಂಪನಿ 212 ಕೋಟಿ ರೂ. ವಹಿವಾಟಿಗೆ 38 ಕೋಟಿ ರೂ. ನಕಲಿ ಐಟಿಸಿ ಪಡೆದಿರುವುದು ಧೃಢಪಟ್ಟಿದ್ದರಿಂದ ದಾಳಿ ನಡೆಸಲಾಗಿತ್ತು. ಬಳಿಕ ಕಂಪನಿಗಳ ಮಾಲೀಕರಾದ ಸಲೀಂ ಉಲ್ಲಾ ಬೇಗ್, ಹಸ್ಸೆನ್ ಬೇಗ್‌ರನ್ನು ಬಂಧಿಸಲಾಗಿತ್ತು.

ಮಾಧ್ಯಮ ಸಲಹೆಗಾರ ಹೊಣೆಗಾರಿಕೆ ಹೂವಿನ ಹಾದಿ ಅಲ್ಲ

■ **ವಿಕ ಸುದ್ದಿಲೋಕ** ಬೆಂಗಳೂರು

''ಮಾಧ್ಯಮ ಸಲಹೆಗಾರರ ಹೊಣೆಗಾರಿಕೆ ಹೂವಿನ ಹಾದಿ ಅಲ್ಲ, ಮುಳ್ಳಿನ ಹಾಸಿಗೆ ಇದ್ದ ಹಾಗೆ. ಆದರೆ, ನನಗೆ ಒದಗಿ ಬಂದಿರುವ ಈ ಹೊಣೆಗಾರಿಕೆ ಬಗ್ಗೆ ಯಾವತ್ತೂ ಭ್ರಮನಿರಸನ ಆಗಿಲ್ಲ'' ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅಭಿಪ್ರಾಯಪಟ್ಟರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿ ಮೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಬಳಿಕ 'ಮಾಧ್ಯಮ-ಸಂವಾದ' ಕಾರ್ಯಕ್ರಮದಲ್ಲಿ ಶುಕ್ರವಾರ ಅವರು ಮಾತನಾಡಿದರು.

ಮಾಧ್ಯಮ ಸ್ವಾತಂತ್ರ್ಯಕ್ಕೆ ಸಿಎಂ ಎಂದೂ ಧಕ್ಕೆ ತಂದಿಲ್ಲ: ''ಇವತ್ತಿನವರೆಗೂ ಮುಖ್ಯಮಂತ್ರಿಗಳು ಒಂದು ದಿನವೂ 'ತಮ್ಮ ವಿರುದ್ಧ ಇಂತಹ ಚಾನೆಲ್‌ನಲ್ಲಿ ಸುದ್ದಿ ಬಂದಿದೆ, ನೋಡು' ಎನ್ನುವ ಒಂದು ಮಾತನ್ನೂ ಹೇಳಿಲ್ಲ, ಮಾಧ್ಯಮ ಸ್ವಾತಂತ್ರ್ಯಕ್ಕೆ ಮುಖ್ಯಮಂತ್ರಿಗಳು ಯಾವತ್ತೂ ಧಕ್ಕೆ ಆಗದಂತೆ ನೋಡಿಕೊಂಡಿದ್ದಾರೆ,'' ಎಂದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರನ್ನು ಸನ್ಮಾನಿಸಲಾಯಿತು.

ಜಾಹೀರಾತು ದರ ಪರಿಷ್ಕರಣೆ: ಪತ್ರಿಕೆಗಳಿಗೆ ಜಾಹೀರಾತು ನೀಡುವ ವಿಚಾರದಲ್ಲಿ ಕೆಲವು ಸಮುದಾಯಗಳಿಗೆ ಮಾತ್ರ ಕೆನೆ ಪದರದ ಮಿತಿ ಹಾಕಲಾಗಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ''ಲೋಪಗಳ ಬಗ್ಗೆ ಸಭೆ ನಡೆಸಿ ಚರ್ಚಿಸಲಾಗಿದೆ. ಜಾಹೀರಾತು ನೀತಿ ಕುರಿತ ಬಹುತೇಕ ಸಮಸ್ಯೆಗಳು ಬಗೆಹರಿದಿವೆ. ವೃತ್ತಿಪರವಾಗಿ, ನಿಯಮಿತವಾಗಿ ಪ್ರಕಟವಾಗುವ ಸ್ಥಳೀಯ ಪತ್ರಿಕೆಗಳು ಮುಖ್ಯಮಂತ್ರಿಗಳ ಮೊದಲ ಆದ್ಯತೆಯಾಗಿದೆ. ಸ್ಥಳೀಯ ಮತ್ತು ಸಣ್ಣ ಪತ್ರಿಕೆಗಳಿಗೆ ಜಾಹೀರಾತಿನಲ್ಲಿ ತೊಂದರೆ ಆಗಬಾರದು ಎನ್ನುವ ನಿಲುವು ಮುಖ್ಯಮಂತ್ರಿಗಳದ್ದು. ಪತ್ರಕರ್ತರ ಸಂಘ ಮತ್ತು ಪತ್ರಕರ್ತ ಸಮುದಾಯದ ಒತ್ತಡದಿಂದಲೇ ರಾಜ್ಯದಲ್ಲಿ 'ಜಾಹೀರಾತು ನೀತಿ' ಜಾರಿಗೊಳಿಸಲಾಗಿದೆ. ಜಾಹೀರಾತು ದರ ಪರಿಷ್ಕರಣೆ ವಿಷಯ ಕೂಡ ಚರ್ಚೆಯಲ್ಲಿದೆ,'' ಎಂದರು.

ಕಾರ್ಯಕ್ರಮದಲ್ಲಿ ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು, ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ, ಸಂಘದ ಪದಾಧಿಕಾರಿಗಳಾದ ಜಿ.ಸಿ. ಲೋಕೇಶ, ಸೋಮಶೇಖರ್ ಕೆರಗೋಡು, ವಾಸುದೇವ ಹೊಳ್ಳ, ಎನ್. ರವಿಕುಮಾರ್ ಉಪಸ್ಥಿತರಿದ್ದರು.

ಉಚಿತ ಬಸ್ ಪಾಸ್‌ಗೆ ವಾರದಲ್ಲಿ ಆದೇಶ

''ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡಲು ವಿಧಿಸಿರುವ ಕಠಿಣವಾದ ಎರಡು ಷರತ್ತು ಸಡಿಲಿಸಲು ಸಭೆ ನಡೆಸಿ ತೀರ್ಮಾನಿಸಲಾಗಿದೆ. ಈ ಬಗ್ಗೆ ವಾರದಲ್ಲಿ ಆದೇಶ ಹೊರಬೀಳಲಿದೆ. ಇದರಿಂದ ಆರು ಸಾವಿರಕ್ಕೂ ಹೆಚ್ಚು ಪತ್ರಕರ್ತರಿಗೆ ಸವಲತ್ತು ಸಿಗುವ ಸಾಧ್ಯತೆಗಳಿವೆ,'' ಎಂದು ಪ್ರಭಾಕರ್ ಹೇಳಿದರು.

ಕಾಕ್ಸ್‌ಟೌನ್‌ನ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕೋತ್ಸವ ಶುಕ್ರವಾರ ನಡೆಯಿತು. ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಸರ್ದಾರ್ ಮಲ್ ಸುರಾನಾ ಕಾರ್ಯಕ್ರಮ ಉದ್ಘಾಟಿಸಿದರು. ಪ್ರಾಂಶುಪಾಲ ಕೆ. ರಘುನಾಥ ಅಧ್ಯಕ್ಷತೆ ವಹಿಸಿದ್ದರು. ನಾನಾ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸಹಾಯಧನ ವಿತರಿಸಲಾಯಿತು.

ಎನ್‌ಶೂರ್ ರಿಲಾಯಬಲ್ ಪವರ್ ಸಲ್ಯೂಷನ್ ಸಂಸ್ಥೆಯು ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅತ್ಯಾಧುನಿಕ ನೂತನ ಉತ್ಪನ್ನಗಳ ಸರಣಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಸಂಸ್ಥೆಯ ನಿರ್ದೇಶಕ ಚಂದ್ರಕಾಂತ್ ರಾಮಲಿಂಗಂ, ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ಉಪಾಧ್ಯಕ್ಷ ಮೃದುಲ್ ಕಾಂತ್ ಶ್ರೀವಾಸ್ತವ ಸೇರಿದಂತೆ ಇತರ ಮುಖ್ಯಸ್ಥರು ಉಪಸ್ಥಿತರಿದ್ದರು.

ಸಜ್ಜೆಪಾಳ್ಯದಲ್ಲಿ ನೆಫ್ರೋ ಯುರಾಲಜಿ ಆಸ್ಪತ್ರೆ

■ **ವಿಕ ಸುದ್ದಿಲೋಕ** ಬೆಂಗಳೂರು

ನಾಗರಬಾವಿ ಬಳಿಯ ಸಜ್ಜೆಪಾಳ್ಯದಲ್ಲಿ 500 ಹಾಸಿಗೆ ಸಾಮರ್ಥ್ಯದ ನೆಫ್ರೋ ಯುರಾಲಜಿ ನೂತನ ಆಸ್ಪತ್ರೆ ನಿರ್ಮಿಸಲು ಸರಕಾರ ಮುಂದಾಗಿದ್ದು, ಶೀಘ್ರ ನಿರ್ಧಾರ ಕೈಗೊಳ್ಳಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆ ಹಾಗೂ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಉಪಸ್ಥಿತಿಯಲ್ಲಿ ವಿಧಾನಸೌಧದಲ್ಲಿ ಶುಕ್ರವಾರ ನೆಫ್ರೋ ಯುರಾಲಜಿ ಸಂಸ್ಥೆಯ ಮಂಡಳಿ ಸಭೆಯಲ್ಲಿ ಈ ಸಂಬಂಧ ಚರ್ಚೆ ನಡೆಸಲಾಗಿದೆ.

ಸುಮಾರು 265ರಿಂದ 268 ಕೋಟಿ ರೂ. ವೆಚ್ಚದಲ್ಲಿ ನೂತನ ಆಸ್ಪತ್ರೆ ನಿರ್ಮಿಸಲು ಸರಕಾರ ಮುಂದಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ. ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಂಬಂಧಿಸಿದ 3 ಎಕರೆ ಜಾಗ ಇಲ್ಲಿದೆ. ಉಳಿದಂತೆ ಇದಕ್ಕೆ ಹೊಂದಿಕೊಂಡಿರುವ ಸಮಾಜ ಕಲ್ಯಾಣ ಇಲಾಖೆಯ 2 ಎಕರೆ ಜಾಗ ನೀಡಲು ಕೋರಲಾಗಿದ್ದು, ಅದಕ್ಕೆ ಒಪ್ಪಿಗೆ ದೊರೆತಿದೆ.

ನೆಫ್ರೋ ಯುರಾಲಜಿ ಸಂಸ್ಥೆಯ ಮಂಡಳಿ ಸಭೆಯಲ್ಲಿ ಚರ್ಚೆ

ಇದರ ಜತೆಗೆ, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿರ್ಮಿಸಲಾದ ಹೊಸ ಕಟ್ಟಡದಲ್ಲಿ ನೆಫ್ರೋ ಯುರಾಲಜಿ ನೂತನ ಆಸ್ಪತ್ರೆ ತೆರೆಯಲಾಗುತ್ತಿದ್ದು, ಶೀಘ್ರವೇ ಅದರ ಉದ್ಘಾಟನೆಯನ್ನು ಸಿಎಂ ಸಿದ್ದರಾಮಯ್ಯ ನೆರವೇರಿಸಲಿದ್ದಾರೆ. ಇದರ ಜತೆಗೆ ಮೈಸೂರಿನಲ್ಲೂ ಹೊಸ ನೆಫ್ರೋ ಯುರಾಲಜಿ ಸಂಸ್ಥೆಯ ಆಸ್ಪತ್ರೆ ನಿರ್ಮಿಸುವ ಕುರಿತಂತೆ ಸಭೆಯಲ್ಲಿ ಚರ್ಚೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲಿ ನೆಫ್ರೋ ಯುರಾಲಜಿ ಸಂಸ್ಥೆಯಲ್ಲಿ ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. 2025ರಲ್ಲಿ 106101 ಹೊರರೋಗಿಗಳು, 6345 ಒಳರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. 27961 ಡಯಾಲಿಸಿಸ್ ಮಾಡಲಾಗಿದೆ. 2071 ಮೇಜರ್ ಆಪರೇಷನ್ ಹಾಗೂ 5337 ಮೈನರ್ ಆಪರೇಷನ್ ಮಾಡಲಾಗಿದೆ. ಇದರ ಜತೆಗೆ ರೀನಲ್ ಬಯಾಪ್ಸಿ ಸೇರಿ 6206 ಇತರೆ ವೈದ್ಯಕೀಯ ಚಿಕಿತ್ಸೆ ನೀಡಲಾಗಿದೆ. ಮೈಸೂರಿನ ಐಎನ್‌ಯುನಲ್ಲಿ ಕಳೆದ ವರ್ಷ 10543 ಹೊರರೋಗಿಗಳು ಹಾಗೂ 1312 ಒಳರೋಗಿಗಳು ಚಿಕಿತ್ಸೆ ಪಡೆದಿದ್ದಾರೆ. ಹೆಚ್ಚುತ್ತಿರುವ ರೋಗಿಗಳಿಗೆ ಸಮರ್ಪಕ ಚಿಕಿತ್ಸೆ ಒದಗಿಸಲು ನೂತನ ಆಸ್ಪತ್ರೆ ಮಾಡಬೇಕಾಗಿದ್ದು, ಶೀಘ್ರ ಇದರ ರೂಪುರೇಷೆ ಸಿದ್ಧಪಡಿಸಬೇಕು. ಈ ಸಂಬಂಧ ಸೂಕ್ತ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸಿಎಂ ಹಾಗೂ ಸಚಿವರು ಸೂಚಿಸಿದ್ದಾರೆ.

ಸಭೆಯಲ್ಲಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಬಿ.ಎಲ್. ಸುಜಾತಾ ರಾಥೋಡ್, ಐಎನ್‌ಯು ನಿರ್ದೇಶಕರಾದ ಡಾ. ಎಂ. ಶಿವಲಿಂಗಯ್ಯ ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

12 ಕೋಟಿ ರೂ. ಮೌಲ್ಯದ ಬಿಡಿಎ ಆಸ್ತಿ ವಶ

ಬೆಂಗಳೂರು: ಕೇಂಬ್ರಿಡ್ಜ್ ಬಡಾವಣೆ, ದೂಪನಹಳ್ಳಿ ಹಾಗೂ ದೊಮ್ಮಲೂರು ಬಡಾವಣೆಗಳಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡಗಳನ್ನು ತೆರವುಗೊಳಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), 12 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಶುಕ್ರವಾರ ವಶಪಡಿಸಿಕೊಂಡಿದೆ.

ಕೇಂಬ್ರಿಡ್ಜ್ ಬಡಾವಣೆಯ ನಿವೇಶನ ಸಂಖ್ಯೆ 61ರಲ್ಲಿ 40/60 ಅಡಿ ನಿವೇಶನ, ದೂಕನಹಳ್ಳಿ ಗ್ರಾಮದ ನಿವೇಶನ ಸಂಖ್ಯೆ 3746ರಲ್ಲಿ 40X40 ಅಡಿ ನಿವೇಶನ ಮತ್ತು ದೊಮ್ಮಲೂರು 1ನೇ ಹಂತದಲ್ಲಿರುವ ನಿವೇಶನ ಸಂಖ್ಯೆ 30ರಲ್ಲಿ 20X40ರಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡಗಳನ್ನು ತೆರವುಗೊಳಿಸಿದೆ.

ಈ ಕಾರ್ಯಾಚರಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕರು, ಪೂರ್ವ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸೇರಿದಂತೆ ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನಡೆಸಲಾಯಿತು ಎಂದು ಬಿಡಿಎ ಪ್ರಕಟಣೆ ತಿಳಿಸಿದೆ.

3 ಡಿ ತಂತ್ರಜ್ಞಾನ ಬಳಸಿ ಸೊಂಟದ ಕೀಲಿನ ಶಸ್ತ್ರಚಿಕಿತ್ಸೆ

ಬೆಂಗಳೂರು: ಕೆಂಗೇರಿಯ ಗ್ಲೆನಿಗಲ್ಸ್ ಬಿಜಿಎಸ್ ಆಸ್ಪತ್ರೆ (ಫೋರ್ಟಿಸ್ ಹೆಲ್ತ್‌ಕೇರ್ ನೆಟ್‌ವರ್ಕ್‌ನ ಭಾಗ) ಯ ವೈದ್ಯರು ಆಫ್ರಿಕಾದ ಮಾಲವಿ ಮೂಲದ 32 ವರ್ಷದ ರೋಗಿಯ ಸೊಂಟಕ್ಕೆ ಕಸ್ಟಮೈಸ್ಡ್ 3ಡಿ ಇಂಪ್ಲಾಂಟ್ ಅಳವಡಿಕೆ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದ್ದಾರೆ.

ಮೂರು ವರ್ಷಗಳ ಹಿಂದೆ ರಸ್ತೆ ಅಪಘಾತಕ್ಕೊಳಗಾದ ಬಳಿಕ ರೋಗಿಯ ಬಲಬದಿಯ ಸೊಂಟದ ಕೀಲು ತಪ್ಪಿ ಹೋಗಿತ್ತು. ಇದರಿಂದ ತೀವ್ರ ನೋವು ಕಾಣಿಸಿಕೊಳ್ಳುತ್ತಿತ್ತು ಮಾತ್ರವಲ್ಲದೆ ನಡೆಯಲು ಕಷ್ಟಪಡುತ್ತಿದ್ದರು. ದೀರ್ಘ ಕಾಲ ಹೀಗೆ ಇದ್ದ ಕಾರಣ ಪ್ರಮುಖ ಮೂಳೆಗೂ ಹಾನಿಯಾಗಿತ್ತು. ಈ ಹಿನ್ನೆಲೆಯಲ್ಲಿ ಡಾ. ಬಸವರಾಜ್ ಸಿ.ಎಂ. ನೇತೃತ್ವದ ಮೂಳೆ ಚಿಕಿತ್ಸಾ ತಂಡವು ಹಾನಿಗೊಂಡ ಕೀಲುಗಳನ್ನು ಸುಧಾರಿತ 3ಡಿ ಮುದ್ರಿತ ತಂತ್ರಜ್ಞಾನದಿಂದ ನಿರ್ಮಿಸಿದ ಟೈಟಾನಿಯಂ ಇಂಪ್ಲಾಂಟ್‌ನಿಂದ ಬದಲಿಸಿತು. ಶಸ್ತ್ರಚಿಕಿತ್ಸೆಯ ನಂತರ ಕೇವಲ ಎರಡು ವಾರಗಳಲ್ಲಿ ರೋಗಿಯಲ್ಲಿ ನೋವು ಕಡಿಮೆಯಾಗಿದ್ದು, ನಡಿಗೆ ಸಾಮರ್ಥ್ಯದಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ.

ಗ್ಲೆನಿಗಲ್ಸ್ ಬಿಜಿಎಸ್ ಆಸ್ಪತ್ರೆ ಸಿಒಒ ರವಿ ಬಗಲಿ, ''ಕಸ್ಟಮೈಸ್ಡ್ 3ಡಿ ಪ್ರಿಂಟಿಂಗ್ ನಿಖರ ಮತ್ತು ಉತ್ತಮ ಫಲಿತಾಂಶದೊಂದಿಗೆ ಹೆಚ್ಚು ಸಂಕೀರ್ಣ ಪ್ರಕರಣಗಳ ಚಿಕಿತ್ಸೆಯಲ್ಲಿ ವೈದ್ಯರಿಗೆ ಸಹಕರಿಸುತ್ತಿದೆ,'' ಎಂದು ಹೇಳಿದರು.

ಕಾಕ್ರೋಚ್ ಜನತಾ ಪಾರ್ಟಿ ಕಾರ್ಯಕ್ರಮಕ್ಕೆ ಅನುಮತಿ ಇಲ್ಲ

■ **ವಿಕ ಸುದ್ದಿಲೋಕ** ಬೆಂಗಳೂರು

ದೇಶದಲ್ಲಿ ರಾಜಕೀಯ ಸಂಚಲನ ಸೃಷ್ಟಿಸಿರುವ ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ)ಯ ಕಾರ್ಯಕ್ರಮಕ್ಕೆ ಅಧಿಕೃತ ಅನುಮತಿ ನೀಡಿಲ್ಲ ನಗರ ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ನಗರದ ಪುರಭವನದ ಮುಂಭಾಗದಲ್ಲಿ ಮೇ 24ರಂದು ಮಾನವ ಸರಪಳಿ ನಿರ್ಮಾಣಕ್ಕೆ ಕರೆ ನೀಡಿರುವ ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ರಾಜಧಾನಿಯಲ್ಲಿ ಮಾನವ ಸರಪಳಿ ಪೋಸ್ಟ್ ವೈರಲ್

ಈ ಪೋಸ್ಟ್ ಬಗ್ಗೆ ಪ್ರತಿಕ್ರಿಯಿಸಿರುವ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, ''ಟೌನ್‌ಹಾಲ್ ಬಳಿ ಮಾನವ ಸರಪಳಿ ನಿರ್ಮಾಣಕ್ಕೆ ಅನುಮತಿ ಕೋರಿ ಯಾವುದೇ ವ್ಯಕ್ತಿ, ಸಂಘಟನೆ ಅಥವಾ ಪಕ್ಷದಿಂದ ಇಲಾಖೆಗೆ ಅರ್ಜಿ ಸಲ್ಲಿಸಿಲ್ಲ, ಕಾರ್ಯಕ್ರಮಕ್ಕೆ ಟೌನ್‌ಹಾಲ್ ಮುಂಭಾಗದ ಸ್ಥಳ ಬಳಸಿಕೊಳ್ಳಲು ಜಿಬಿಎ ಕಚೇರಿಯಿಂದಲೂ ಅನುಮತಿ ಪಡೆದಿಲ್ಲ,'' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

''ಹೈಕೋರ್ಟ್ ಆದೇಶದ ಪ್ರಕಾರ ಫ್ರೀಡಂಪಾರ್ಕ್ ಹೊರತುಪಡಿಸಿ ನಗರದ ಬೇರೆಲ್ಲೂ ಧರಣಿ, ಪ್ರತಿಭಟನೆ, ಮೆರವಣಿಗೆ ನಡೆಸಲು ಅವಕಾಶವಿಲ್ಲ. ಇದನ್ನು ಉಲ್ಲಂಘಿಸಿ ಮಾನವ ಸರಪಳಿ ನಿರ್ಮಿಸುವುದು ಹೈಕೋರ್ಟ್ ಆದೇಶದ ಉಲ್ಲಂಘನೆಯಾಗುತ್ತದೆ. ಸಾರ್ವಜನಿಕರು ಈ ಕುರಿತ ಸಂದೇಶವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳಬಾರದು. ಜತೆಗೆ, ಮೇ 24ರಂದು ಟೌನ್‌ಹಾಲ್ ಬಳಿ ಬಂದು ಗುಂಪು ಸೇರಬಾರದು,'' ಎಂದು ಹೇಳಿದ್ದಾರೆ.

ಡಾ. ಆರತಿ ಕೃಷ್ಣ ಸೇರಿದಂತೆ ನಾಲ್ವರಿಗೆ 'ಜೀವನ್ಮುಖಿ ಪ್ರಶಸ್ತಿ'

■ **ವಿಕ ಸುದ್ದಿಲೋಕ** ಬೆಂಗಳೂರು

ವಿಧಾನ ಪರಿಷತ್ ಸದಸ್ಯರಾದ ಡಾ.ಆರತಿ ಕೃಷ್ಣ ಸೇರಿದಂತೆ ನಾಲ್ವರನ್ನು ಪ್ರಸಕ್ತ ಸಾಲಿನ 'ಜೀವನ್ಮುಖಿ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ.

ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಸಹಯೋಗದೊಂದಿಗೆ ಜೀವನ್ಮುಖಿ ಕನ್ನಡ ಪಾಕ್ಷಿಕ ಪತ್ರಿಕೆಯು 16ನೇ ವರ್ಷದ ಪ್ರಶಸ್ತಿ ನೀಡುತ್ತಿದೆ. ಡಾ. ಆರತಿ ಕೃಷ್ಣ, ಗೃಹ ಮಂಡಳಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಕೆ.ಎ.ದಯಾನಂದ, ಬೆಂಗಳೂರು ಪಶ್ಚಿಮ ವಿಭಾಗದ ಉಪ ಪೊಲೀಸ್ ಆಯುಕ್ತ ಎನ್. ಯತೀಶ್ ಮತ್ತು ಸಾಹಿತಿ ಹಾಗೂ ಸಾಂಸ್ಕೃತಿಕ ಸಂಘಟಕ ನಂ. ನಂಜಪ್ಪ ರಾಜಣ್ಣ ಅವರು 'ಜೀವನ್ಮುಖಿ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು 5 ಸಾವಿರ ರೂ. ನಗದು, ಫಲಕ ಒಳಗೊಂಡಿದೆ.

ಪ್ರಶಸ್ತಿ ಪ್ರದಾನ ಸಮಾರಂಭವು ಜೂ.7ರಂದು ಸಂಜೆ 4 ಗಂಟೆಗೆ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯಲಿದೆ.

ಇದೇ ಸಂದರ್ಭದಲ್ಲಿ ಪ್ರತಿಭಾವಂತ ಬಾಲ ಪ್ರತಿಭೆಗಳಾದ ಕ್ಷಮಾ ಯು. ಐತಾಳ್, ಚಿರಂತ್ ಎಸ್., ಬಿ.ಶಿವಾನಿ ಮತ್ತಿತರರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಗುತ್ತದೆ

ವಾರಾಂತ್ಯ

ಶನಿವಾರ

ಅಯೋಮಯ

ಯುವಕ ಸಂಘ ಫ್ರೀಸ್ಪೇಸ್ ಅಯೋಮಯ ನಾಟಕದ 10ನೇ ಪ್ರದರ್ಶನ ಆಯೋಜಿಸಿದೆ. ಗೌರೀಶ ಜೋಶಿ ನಾಟಕವನ್ನು ರಚಿಸಿ, ನಿರ್ದೇಶಿಸಿದ್ದಾರೆ.

ಸ್ಥಳ: ಸಿ.ಅಶ್ವತ್ಥ್ ಕಲಾಭವನ, ಎನ್.ಆರ್.ಕಾಲೊನಿ, ಸಂಜೆ 7.

ಅನವರತ

ಬೆಂಗಳೂರು ಪ್ಲೇಯರ್ಸ್ ತಂಡವು ಅನವರತ ನಾಟಕ ಪ್ರದರ್ಶಿಸಲಿದೆ. ಚಿದಾನಂದ್ ಅವರು ರಚಿಸಿ, ನಿರ್ದೇಶಿಸಿರುವ ಈ ನಾಟಕವು ಕಲೆ ಹಾಗೂ ಕಲಾವಿದನ ಕುರಿತ ಕಥಾಹಂದರ ಒಳಗೊಂಡಿದೆ.

ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ. ರಾತ್ರಿ 7

ಸೀತಾಸ್ವಯಂವರಂ

ಅಭಿಜ್ಞಾನಾಟಕ ತಂಡವು ಸೀತಾಸ್ವಯಂವರಂ ನಾಟಕ ಪ್ರದರ್ಶನ ಆಯೋಜಿಸಿದೆ. ಎಂ.ಎಲ್. ಶ್ರೀಕಂಠೇಶ ಗೌಡ ರಚನೆಯ ಈ ನಾಟಕವನ್ನು ಮಂಜುನಾಥ ಎಲ್.ಬಡಿಗೇರ ನಿರ್ದೇಶಿಸಿದ್ದಾರೆ. ಇದು ರಾಮಾಯಣದ ಪ್ರಸಿದ್ಧ ಕಥೆಯನ್ನೇ ಆಧಾರವಾಗಿಸಿಕೊಂಡಿದ್ದರೂ, ಸಂಪೂರ್ಣ ವಿಭಿನ್ನ ನಾಟಕೀಯ ನಿರೂಪಣೆಯನ್ನು ಹೊಂದಿದೆ.

ಸ್ಥಳ: ರಂಗಶಂಕರ, ಜೆ.ಪಿ.ನಗರ. ಮಧ್ಯಾಹ್ನ 3.30 ಹಾಗೂ ಸಂಜೆ 7.30.

ಭರತನಾಟ್ಯ

ಉಡುಪ ಫೌಂಡೇಶನ್ 'ಸಮರ್ಪಣಾ' ಭರತನಾಟ್ಯ ನೃತ್ಯ ಕಾರ್ಯಕ್ರಮ ಆಯೋಜಿಸಿದೆ. ಅಮೆರಿಕದ ಗುರು

ಅನುಪಮಾರಾವ್ ಮಿರ್ಲೆ ಶಿಷ್ಯೆಯರಾದ ಅನಿಕಾ ಮತ್ತು ಐಶಾನಿ ನೃತ್ಯ ಪ್ರದರ್ಶನ ಪ್ರಸ್ತುತಪಡಿಸಲಿದ್ದಾರೆ.

ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ. ಬೆಳಗ್ಗೆ 10.

ಕಲಾ ಸ್ಪಂದನ

ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್ ಹಾಗೂ ಅಲಂಕೃತ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಶಾಸ್ತ್ರೀಯ ಸಂಗೀತ, ನೃತ್ಯದ 'ಕಲಾ ಸ್ಪಂದನ' ತಿಂಗಳ ಕಾರ್ಯಕ್ರಮ ಆಯೋಜಿಸಿದೆ. ಭರತನಾಟ್ಯ, ಕಲಾ ನಿರ್ದೇಶಕ ಡಾ.ಶೇಖರ್ ವಿ.ಐಯ್ಯಂಗಾರ್ ಮತ್ತು ಸಿತಾರ್ ವಾದಕ ಸಂಜೀವ್ ಕೊರ್ತಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಸ್ಥಳ : ಸನಾತನ ಕಲಾಕ್ಷೇತ್ರ, ಜಯನಗರ 4ನೇ ಬ್ಲಾಕ್. ಸಂಜೆ 6.

ಭಾನುವಾರ

ರಂಗಪ್ರವೇಶ

ಗುರು ರೇವತಿ ನರಸಿಂಹನ್ ಅವರ ಶಿಷ್ಯೆ ಪೂರ್ವಿ ಸಂಪತ್ ಕಶ್ಯಪ್ ಅವರ

ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ಆಯೋಜಿಸಲಾಗಿದೆ. ಭರತನಾಟ್ಯ ಕಲಾವಿದ ಪಿ. ಪ್ರವೀಣ್‌ಕುಮಾರ್, ಕುಮರನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ನಿರ್ದೇಶಕಿ ದೀಪಾ ಶ್ರೀಧರ್, ನೃತ್ಯ ವಿಮರ್ಶಕ ನಂಜುಂಡರಾವ್ ಮತ್ತಿತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸ್ಥಳ: ಮೀನಾಕ್ಷಿ ರಂಗಮಂಟಪ, ದೊಡ್ಡಕಲ್ಲಸಂದ್ರ. ಸಂಜೆ 6

ಭಾಗವತರು ಸಂಸ್ಥೆಗೆ ಬೆಳ್ಳಿ ಹಬ್ಬದ ಸಂಭ್ರಮ

■ **ವಿಕ ಸುದ್ದಿಲೋಕ** ಬೆಂಗಳೂರು

ಕಳೆದ 25 ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡಬೇಕಿದ್ದ ಕೆಲಸವನ್ನು ಭಾಗವತರು ಸಂಸ್ಥೆ ಮಾಡಿದ್ದು, ಕರ್ನಾಟಕದ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ದೊಡ್ಡ ಕೊಡುಗೆ ನೀಡಿದೆ ಎಂದು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಅಭಿಪ್ರಾಯಪಟ್ಟರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಭಾಗವತರು ಸಂಸ್ಥೆಯ ಬೆಳ್ಳಿಹಬ್ಬದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

''ಕನ್ನಡ ಮತ್ತು ಸಾಂಸ್ಕೃತಿಕ ಕ್ಷೇತ್ರದ ಕೆಲಸಕ್ಕಾಗಿ ಮುಖ್ಯಮಂತ್ರಿಯಾಗಿದ್ದ ವೇಳೆ ನಾನು ಮತ್ತು ನಮ್ಮ ಸಹೋದ್ಯೋಗಿ ಮಿತ್ರರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸ್ಥಾಪಿಸಿದೆವು. ಅದಾದ ನಂತರ ಹುಟ್ಟಿಕೊಂಡ ಭಾಗವತರು ಸಂಸ್ಥೆ ಸಾಕಷ್ಟು ಕೆಲಸಗಳನ್ನು ಮಾಡಿದೆ. 25 ನಾಟಕೋತ್ಸವಗಳನ್ನು ನಡೆಸಿದೆ. ಹಿರಿಯ ಸಾಹಿತಿಗಳಿಗೆ ಗೌರವ ಸಮರ್ಪಿಸಿದೆ. ನಾಟಕ ರಚನಾಕಾರರು ರಂಗಭೂಮಿ ಆಸ್ತಿಯಾಗಿದ್ದಾರೆ. ರಂಗಭೂಮಿ ಕೆಲಸ ಸುಲಭವಾದದ್ದಲ್ಲ, ಆದರೆ, ಕಳೆದ 25 ವರ್ಷಗಳಿಂದಲೂ ನಾಟಕ ರಚನೆ, ಪ್ರದರ್ಶನಗಳನ್ನು ನಡೆಸಿಕೊಂಡು ಬಂದ ಕೀರ್ತಿ ಸಂಸ್ಥೆಗೆ ಸಲ್ಲುತ್ತದೆ,'' ಎಂದು ಹರ್ಷ ವ್ಯಕ್ತಪಡಿಸಿದರು.

ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಅವರು ರಂಗಕರ್ಮಿಗಳಿಗೆ ರಂಗಗೌರವ ಪ್ರಶಸ್ತಿ ನೀಡಿ, ಗೌರವಿಸಿದರು.

ಸಾಹಿತಿ ಡಾ. ಎಲ್. ಹನುಮಂತಯ್ಯ ಮಾತನಾಡಿ, ''ಭಾಗವತರು ಸಂಸ್ಥೆಯು 25 ವರ್ಷಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ಮೌಲಿಕ ಕೆಲಸ ಮಾಡಿಕೊಂಡು ಬಂದಿದೆ. ಸಾಮಾಜಿಕ ಮಾಧ್ಯಮದ ಪ್ರಭಾವದಿಂದ ಪ್ರಸ್ತುತ ಕಾಲಘಟ್ಟದಲ್ಲಿ ಪ್ರೇಕ್ಷಕರನ್ನು ಒಂದುಗೂಡಿಸುವುದು ದೊಡ್ಡ ಸವಾಲಾಗಿದೆ. ಇಂತಹ ಸಂದರ್ಭದಲ್ಲಿ ಭಾಗವತರು ಸಂಸ್ಥೆಯು ಹತ್ತು ದಿನಗಳ ನಾಟಕ ಕಾರ್ಯಕ್ರಮ ನಡೆಸಿ, ಯಶಸ್ವಿಯಾಗಿದೆ. ಅದೆಷ್ಟೋ ಸಂಸ್ಥೆಗಳು ಹುಟ್ಟಿಕೊಂಡ ವೇಗದಲ್ಲಿ ಅವನತಿ ಹೊಂದಿವೆ. ಆದರೆ, ಭಾಗವತರು ಸಂಸ್ಥೆ ಸರಕಾರದ ನೆರವು ಪಡೆಯದೇ ಗಟ್ಟಿಯಾಗಿ ನಿಂತು ಕೆಲಸ ಮಾಡುತ್ತಿದೆ,'' ಎಂದು ಶ್ಲಾಘಿಸಿದರು.

ಇದೇ ವೇಳೆ ಭಾಗವತರು ಬೆಳ್ಳಿ ಪಯಣ, ರಂಗಲೋಕ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಅಲ್ಲದೆ, 25 ರಂಗಕರ್ಮಿಗಳಿಗೆ ರಂಗ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವತರು ಸಂಸ್ಥೆಯ ಅಧ್ಯಕ್ಷ ಕೆ. ರೇವಣ್ಣ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ರಂಗ ಸಂಘಟಕ ಡಾ. ಶ್ರೀನಿವಾಸ ಜಿ. ಕಪ್ಪಣ್ಣ ಉಪಸ್ಥಿತರಿದ್ದರು.

ಮರ ಬಿದ್ದು ಯುವಕನ ಕಾಲು ಮುರಿತ

ಬೆಂಗಳೂರು: ವಿಜಯನಗರದ 7ನೇ ಮುಖ್ಯ ರಸ್ತೆಯಲ್ಲಿ ಗುರುವಾರ ಸಂಜೆ ಮರ ಬಿದ್ದು ಬೈಕ್‌ನಲ್ಲಿ ಸಂಚರಿಸುತ್ತಿದ್ದ 32 ವರ್ಷದ ಅಭಿಷೇಕ್ ಎಂಬುವವರು ಗಾಯಗೊಂಡಿದ್ದಾರೆ.

ಮರದ ದೊಡ್ಡ ಕೊಂಬೆ ಬಿದ್ದ ರಭಸಕ್ಕೆ ಅಭಿಷೇಕ್ ಕಾಲು ಮುರಿದಿದೆ. ಹೆಲ್ಮೆಟ್ ಧರಿಸಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದು, ಕಾಮಾಕ್ಷಿಪಾಳ್ಯದ ಬಳಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ. ಇದೇ ಘಟನೆಯಲ್ಲಿ ಸ್ಕೂಟರ್ ಹಾಗೂ ಕಾರು ನಜ್ಜುಗುಜ್ಜಾಗಿವೆ.

ಅಧಿಕಾರಿಗಳ ಬೇಜವಾಬ್ದಾರಿಗೆ ಆಕ್ರೋಶ: ''ಒಣಗಿ ನಿಂತಿರುವ ಮತ್ತು ಅಪಾಯಕಾರಿಯಾಗಿರುವ ಮರಗಳನ್ನು ತೆರವುಗೊಳಿಸುವಂತೆ 15 ದಿನಗಳ ಹಿಂದೆಯೇ ಲಿಖಿತವಾಗಿ ದೂರು ನೀಡಿದ್ದೆವು. ಆದರೆ ಜಿಬಿಎಯ ಅರಣ್ಯ ವಿಭಾಗ ಸ್ಪಂದಿಸಿಲ್ಲ,'' ಎಂದು ಸ್ಥಳೀಯ ನಿವಾಸಿಗಳು ದೂರಿದ್ದಾರೆ.

ಶಾಸಕರ ಭೇಟಿ, ಪರಿಶೀಲನೆ: ಘಟನಾ ಸ್ಥಳಕ್ಕೆ ವಿಜಯನಗರ ಕ್ಷೇತ್ರದ ಶಾಸಕ ಎಚ್. ಕೃಷ್ಣಪ್ಪ ಹಾಗೂ ಅಧಿಕಾರಿ ಮಧು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಶನಿವಾರ,23 ಮೇ 2026
ಇಂದಿನ ತಾಪಮಾನ 22° ಕನಿಷ್ಠ 30° ಗರಿಷ್ಠ
X.com/vijaykarnataka facebook.com/vijaykarnataka www.vijaykarnataka.com



420 ಕೋಟಿ ವಂಚನೆ: ಇಡಿ, ಡಿಆರ್‌ಐ ತನಿಖೆ ಉರುಳು

»06

ಪ್ಯಾಕೇಜ್-1ರ ಗುತ್ತಿಗೆ ಅಂತಿಮ | ಬಿಡಿಎ ಅಂದಾಜಿಸಿದ್ದ ವೆಚ್ಚ 3348.05 ಕೋಟಿ ರೂ.

ಪಿಆರ್‌ಆರ್ ಟೆಂಡರ್ ಎಸ್‌ಎನ್‌ಸಿಗೆ

ಅಂದಾಜು ವೆಚ್ಚಕ್ಕಿಂತ ಶೇ 4.93ರಷ್ಟು ಹೆಚ್ಚು ಮೊತ್ತಕ್ಕೆ ಬಿಡ್ ಸಲ್ಲಿಕೆ

19.80 ಕಿ.ಮೀ. ಉದ್ದದ ರಸ್ತೆ ನಿರ್ಮಾಣ

10 ವರ್ಷ ಕಾರ್ಯಾಚರಣೆ, ನಿರ್ವಹಣೆಗೆ 248 ಕೋಟಿ ರೂ. ವ್ಯಯ

■ **ವಿಕ ಸುದ್ದಿಲೋಕ** ಬೆಂಗಳೂರು

ದಶಕಗಳಿಂದ ನನೆಗುದಿಗೆ ಬಿದ್ದಿದ್ದ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪಿಆರ್‌ಆರ್-1) ಯೋಜನೆಯು ಕೊನೆಗೂ ಕಾರ್ಯಗತದ ಹಂತಕ್ಕೆ ಬಂದು ನಿಂತಿದ್ದು, ನಿರ್ಮಾಣ ಕಾಮಗಾರಿಯ ಗುತ್ತಿಗೆಯು ಶಂಕರನಾರಾಯಣ ಕನ್‌ಸ್ಟ್ರಕ್ಷನ್ (ಎಸ್‌ಎನ್‌ಸಿ) ಕಂಪನಿಯ ಪಾಲಾಗಿದೆ.

■ ಶೇ. 80ರಷ್ಟು ಭೂಸ್ವಾಧೀನ ಪೂರ್ಣ

■ 3 ತಿಂಗಳ ಬಳಿಕ ರಸ್ತೆ ಕಾಮಗಾರಿ ಶುರು

ತುಮಕೂರು ರಸ್ತೆಯ ಮಾದಾವರದಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳ್ಳಾರಿ ರಸ್ತೆವರೆಗಿನ 19.80 ಕಿ.ಮೀ. ಉದ್ದದ (ಪ್ಯಾಕೇಜ್-1) ರಸ್ತೆ ನಿರ್ಮಾಣ ಕಾಮಗಾರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಟೆಂಡರ್ ಕರೆದಿತ್ತು. ಬಿಡ್ ಸಲ್ಲಿಸಿದ್ದ ಎಸ್‌ಎನ್‌ಸಿ ಮತ್ತು ವಿಶ್ವ ಸಮುದ್ರ ಎಂಜಿನಿಯರಿಂಗ್ ಕಂಪನಿಗಳು ತಾಂತ್ರಿಕವಾಗಿ ಅರ್ಹವಾಗಿದ್ದವು. ಆದರೆ, ಅಂತಿಮವಾಗಿ ಕಡಿಮೆ ಮೊತ್ತದ ಬಿಡ್ ಸಲ್ಲಿಸಿದ್ದ ಎಸ್‌ಎನ್‌ಸಿ ಕಂಪನಿಯು ಎಲ್-1 ಗುತ್ತಿಗೆದಾರ ಕಂಪನಿಯಾಗಿ ಟೆಂಡರ್ ಪಡೆಯುವಲ್ಲಿ ಯಶಸ್ವಿಯಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ರಾಜಧಾನಿ ಮೇಲಿನ ಸಂಚಾರ ದಟ್ಟಣೆಯ ಒತ್ತಡ ತಗ್ಗಿಸಲು ರೂಪಿಸಿರುವ 73 ಕಿ.ಮೀ. ಉದ್ದದ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣ ಯೋಜನೆಯನ್ನು ಮೂರು ಪ್ಯಾಕೇಜ್‌ಗಳಾಗಿ ವಿಂಗಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ತುಮಕೂರು ರಸ್ತೆಯ ಮಾದಾವರದಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳ್ಳಾರಿ ರಸ್ತೆವರೆಗಿನ 19.80 ಕಿ.ಮೀ. ಉದ್ದದ ಪ್ಯಾಕೇಜ್-1 ಕಾಮಗಾರಿಯ ಟೆಂಡರ್ ಅಂತಿಮಗೊಳಿಸಿದೆ.

ಅಂದಾಜಿಗಿಂತ ಶೇ 4.93ರಷ್ಟು ಹೆಚ್ಚು: ಪ್ಯಾಕೇಜ್-1ರಡಿ ಮಾದಾವರದಿಂದ ಬಳ್ಳಾರಿ ರಸ್ತೆವರೆಗಿನ 19.80 ಕಿ.ಮೀ. ಉದ್ದದ ರಸ್ತೆ ನಿರ್ಮಾಣಕ್ಕೆ 3348.05 ಕೋಟಿ ರೂ. ವೆಚ್ಚ ಅಂದಾಜಿಸಲಾಗಿತ್ತು. ಆದರೆ, ಎಸ್‌ಎನ್‌ಸಿ ಕಂಪನಿಯು ಅಂದಾಜು ವೆಚ್ಚಕ್ಕಿಂತ ಶೇ. 4.93ರಷ್ಟು (3513 ಕೋಟಿ ರೂ.) ಹೆಚ್ಚು ಮೊತ್ತಕ್ಕೆ ಬಿಡ್ ಸಲ್ಲಿಸಿದೆ. ಬಿಡಿಎ ಮಂಡಳಿ ಸಭೆಯ ಅನುಮೋದನೆ ಪಡೆದ ಬಳಿಕ ಕಾರ್ಯಾದೇಶ ನೀಡಲಾಗುತ್ತದೆ.

''ಗುತ್ತಿಗೆ ಕಂಪನಿಗೆ ಒಪ್ಪಿಗೆ ಪತ್ರ ನೀಡಿದ ಬಳಿಕ ಕಾಮಗಾರಿಗೆ ಅಗತ್ಯವಿರುವ ಕಾರ್ಮಿಕರು ಹಾಗೂ ಯಂತ್ರೋಪಕರಣಗಳನ್ನು ನಿಯೋಜಿಸಲು ಕನಿಷ್ಠ 3 ತಿಂಗಳು ಬೇಕಾಗುತ್ತದೆ. ಅಷ್ಟರೊಳಗೆ ಸ್ವಾಧೀನಪಡಿಸಿಕೊಂಡಿರುವ ಭೂಮಿ ಹಸ್ತಾಂತರಿಸಲಾಗುವುದು,'' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾದಾವರದಿಂದ ಬಳ್ಳಾರಿ ರಸ್ತೆವರೆಗಿನ ಮಾರ್ಗದಲ್ಲಿ ಮೂರು ಕ್ಲೋವರ್‌ಲೀಫ್ ಜಂಕ್ಷನ್‌ಗಳು, ಒಂದು ಗ್ರೇಡ್ ಸೆಪರೇಟರ್, ಎರಡು ರೈಲ್ವೆ ಮೇಲ್ಸೇತುವೆಗಳು, 7.5 ಕಿ.ಮೀ. ಉದ್ದದ ಎಲಿವೇಟೆಡ್ ಕಾರಿಡಾರ್ ನಿರ್ಮಾಣವಾಗಲಿದೆ.





ಈವರೆಗೆ 523 ಎಕರೆ ಸ್ವಾಧೀನ

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಲಿಮಿಟೆಡ್ (ಬಿಬಿಸಿ) ತುಮಕೂರು ರಸ್ತೆಯಿಂದ ಬಳ್ಳಾರಿ ರಸ್ತೆವರೆಗಿನ ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ 665 ಎಕರೆ ಜಮೀನಿನ ಪೈಕಿ 523 ಎಕರೆಯನ್ನು ಸ್ವಾಧೀನಪಡಿಸಿಕೊಂಡಿದೆ. ಇದರಲ್ಲಿ ಸುಮಾರು 200 ಎಕರೆಯಷ್ಟು ಸರಕಾರಿ ಭೂಮಿ ಇದೆ. 523 ಎಕರೆ ಪೈಕಿ 125 ಎಕರೆ ಜಮೀನಿಗೆ ನಗದು, ಟಿಡಿಆರ್, ವಸತಿ ಮತ್ತು ವಾಣಿಜ್ಯ ನಿವೇಶನದ ಪರಿಹಾರ ನೀಡಲಾಗಿದೆ. ಉಳಿದ ಭೂಮಾಲೀಕರು ಪರಿಹಾರ ಪಡೆದುಕೊಳ್ಳಲು ಮುಂದೆ ಬರುತ್ತಿಲ್ಲ. ಹೀಗಾಗಿ, ನಿಗದಿತ ಪರಿಹಾರವನ್ನು ನ್ಯಾಯಾಲಯದಲ್ಲಿ ಠೇವಣಿ ಇಟ್ಟು ಕಾಮಗಾರಿ ಆರಂಭಿಸಲು ನಿರ್ಧರಿಸಲಾಗಿದೆ. ಪಿಆರ್‌ಆರ್-1 ಮಾರ್ಗವು ತುಮಕೂರು ರಸ್ತೆಯಿಂದ ಹೆಸರಘಟ್ಟ ರಸ್ತೆ, ದೊಡ್ಡಬಳ್ಳಾಪುರ ರಸ್ತೆ, ಬಳ್ಳಾರಿ ರಸ್ತೆ, ಹೆಣ್ಣೂರು ರಸ್ತೆ, ಹಳೆ ಮದ್ರಾಸ್ ರಸ್ತೆ, ವೈಟ್‌ಫೀಲ್ಡ್, ಚನ್ನಸಂದ್ರ, ಸರ್ಜಾಪುರ ರಸ್ತೆ, ಹೊಸೂರು ರಸ್ತೆಗೆ ಸಂಪರ್ಕ ಕಲ್ಪಿಸಲಿದೆ.



ಪಿಆರ್‌ಆರ್-1ರ ಮೊದಲ ಪ್ಯಾಕೇಜ್‌ನ ಟೆಂಡರ್ ಅನ್ನು ಎಸ್‌ಎನ್‌ಸಿ ಕಂಪನಿ ಪಡೆದುಕೊಂಡಿದೆ. ಈ ಕಂಪನಿಯು ಅಂದಾಜು ವೆಚ್ಚಕ್ಕಿಂತ ಶೇ 4.93ರಷ್ಟು ಹೆಚ್ಚುವರಿ ಮೊತ್ತಕ್ಕೆ ಬಿಡ್ ಸಲ್ಲಿಸಿದ್ದು, ದರ ಸಂಧಾನ ಮಾತುಕತೆ ನಡೆಸಲಾಗುವುದು. ಈವರೆಗೆ ಶೇ. 80ರಷ್ಟು ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಬಿಡಿಎ ಸಭೆಯಲ್ಲಿ ಅನುಮೋದನೆ ಪಡೆದು, ಗುತ್ತಿಗೆ ಕಂಪನಿಗೆ ಕಾರ್ಯಾದೇಶ ನೀಡಲಾಗುವುದು. ಮುಂದಿನ ಮೂರು ತಿಂಗಳೊಳಗೆ ಕಾಮಗಾರಿ ಶುರುವಾಗಲಿದೆ.

-ಎಲ್.ಕೆ.ಅತೀಕ್ ಅಧ್ಯಕ್ಷ, ಬಿಬಿಸಿಎಲ್

27 ಸಾವಿರ ಕೋಟಿ ಸಾಲ

ಮಾದಾವರದಿಂದ ಬಳ್ಳಾರಿ ರಸ್ತೆವರೆಗೆ ರಸ್ತೆ ನಿರ್ಮಿಸುವ ಗುತ್ತಿಗೆ ಪಡೆದಿರುವ ಎಸ್‌ಎನ್‌ಸಿ ಕಂಪನಿಯೇ 10 ವರ್ಷಗಳ ಕಾಲ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡಲಿದೆ. ಇದಕ್ಕಾಗಿ 248 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಟೋಲ್ ಶುಲ್ಕ ಪಾವತಿಸಬೇಕಾಗುತ್ತದೆ. ಬೆಂಗಳೂರು ಪ್ರಾಧಿಕಾರವೇ ಟೋಲ್ ಶುಲ್ಕ ಸಂಗ್ರಹಿಸಲಿದೆ. ಇದಕ್ಕಾಗಿ ಪ್ರತ್ಯೇಕ ಟೆಂಡರ್ ಕರೆಯಲಾಗುತ್ತದೆ. ಒಟ್ಟು 73 ಕಿ.ಮೀ ಉದ್ದದ ಪಿಆರ್‌ಆರ್-1 ರಸ್ತೆ ನಿರ್ಮಾಣಕ್ಕಾಗಿ ಹುಡ್ಕೋದಿಂದ 27 ಸಾವಿರ ಕೋಟಿ ರೂ. ಸಾಲ ಪಡೆಯಲಾಗಿದೆ. ಸಿವಿಲ್ ಕಾಮಗಾರಿಗೆ ಸುಮಾರು 10,500 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಉಳಿದ ಹಣವನ್ನು ಸ್ವಾಧೀನ ಪಡಿಸಿಕೊಂಡು ಭೂಮಿಯು ಮಾಲೀಕರಿಗೆ ಪರಿಹಾರ ನೀಡಲಾಗುತ್ತದೆ.

ಜೂನ್‌ಗೆ ಮತ್ತೊಂದು ಟೆಂಡರ್

ಬಳ್ಳಾರಿ ರಸ್ತೆಯಿಂದ ಹಳೆ ಮದ್ರಾಸ್ ರಸ್ತೆವರೆಗಿನ 18 ಕಿ.ಮೀ. ಉದ್ದದ ಪ್ಯಾಕೇಜ್-2ರ ಕಾಮಗಾರಿಗೆ 434 ಎಕರೆಯನ್ನು ಭೂಸ್ವಾಧೀನಕ್ಕೆ ಗುರುತಿಸಲಾಗಿದೆ. ಈಗಾಗಲೇ 123 ಎಕರೆಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಮಾರ್ಗದ ಡಿಪಿಆರ್ ಸಿದ್ಧವಾಗುತ್ತಿದೆ. ಹಳೆ ಮದ್ರಾಸ್ ರಸ್ತೆಯಿಂದ ಹೊಸೂರು ರಸ್ತೆವರೆಗಿನ 27.75 ಕಿ.ಮೀ. ಉದ್ದದ ಪ್ಯಾಕೇಜ್-3ಕ್ಕೆ 710 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಪಿಆರ್‌ಆರ್-1ಕ್ಕೆ ಒಟ್ಟು 2418 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಇದರಲ್ಲಿ 1810 ಎಕರೆಯನ್ನು ರಸ್ತೆ ನಿರ್ಮಾಣಕ್ಕೆ, ಉಳಿದ ಜಮೀನನ್ನು ಇಂಟರ್‌ಚೇಂಜ್, ಗ್ರೇಡ್ ಸೆಪರೇಟರ್‌ಗಳ ನಿರ್ಮಾಣಕ್ಕೆ ಬಳಸಲು ಉದ್ದೇಶಿಸಲಾಗಿದೆ.

ಜಿಬಿಎ ಚುನಾವಣೆ: ಕಾಂಗ್ರೆಸ್ ಪ್ರಣಾಳಿಕೆ ಸಮಿತಿ ರಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಜಿಬಿಎ ವ್ಯಾಪ್ತಿಯ 5 ಪಾಲಿಕೆಗಳಿಗೆ ಆಗಸ್ಟ್ ತಿಂಗಳೊಳಗೆ ಚುನಾವಣೆ ನಡೆಸಲು ಸುಪ್ರೀಂಕೋರ್ಟ್ ಅಂತಿಮ ಗಡುವು ವಿಧಿಸಿದ ಬೆನ್ನಲ್ಲೇ ಆಡಳಿತಾರೂಢ ಕಾಂಗ್ರೆಸ್ ತಯಾರಿ ಆರಂಭಿಸಿದೆ. ನಗರದ ನಾಗರಿಕರಿಗೆ ಒದಗಿಸಬಹುದಾದ ಸೌಲಭ್ಯಗಳು ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಣಾಳಿಕೆ ಸಿದ್ಧಪಡಿಸಲು ಚುನಾವಣಾ ಪ್ರಣಾಳಿಕೆ ಸಮಿತಿಗಳನ್ನು ರಚಿಸಲಾಗಿದೆ.

ನಗರದ ನಾಗರಿಕ ಸಮಸ್ಯೆಗಳು ಮತ್ತು ಕುಂದುಕೊರತೆ ನಿವಾರಣೆ, ಸಮಗ್ರ ಬೆಂಗಳೂರು ಅಭಿವೃದ್ಧಿ ದೂರದೃಷ್ಟಿಯೊಂದಿಗೆ ಸಾರ್ವಜನಿಕರು ಮೆಚ್ಚುವಂತಹ ಪ್ರಣಾಳಿಕೆ ಸಿದ್ಧಪಡಿಸಬೇಕು. ಪ್ರತಿ ವಿಧಾನಸಭಾ ಕ್ಷೇತ್ರದ 2-3 ಕಡೆಗಳಲ್ಲಿ ಸಾರ್ವಜನಿಕರ ಸಭೆ ನಡೆಸಿ ಸಲಹೆ ಪಡೆಯಬೇಕು ಎಂದು ಸಮಿತಿಗಳಿಗೆ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಸೂಚಿಸಿದ್ದಾರೆ.

ಪೂರ್ವ ನಗರ ಪಾಲಿಕೆಗೆ ಶಾಸಕ ಶರತ್ ಬಚ್ಚೇಗೌಡ ಅಧ್ಯಕ್ಷತೆಯಲ್ಲಿ ಪ್ರಣಾಳಿಕೆ ಸಮಿತಿ ರಚಿಸಲಾಗಿದ್ದು, ಮನ್ಸೂರ್ ಅಲಿಖಾನ್ ಸಹ ಅಧ್ಯಕ್ಷ ಹಾಗೂ ಮಾಜಿ ಎಂಎಲ್ಸಿ ಎಂ.ನಾರಾಯಣಸ್ವಾಮಿ ಅವರನ್ನು ಸಂಚಾಲಕರಾಗಿ ನೇಮಕ ಮಾಡಲಾಗಿದೆ. ಪಶ್ಚಿಮ ನಗರಪಾಲಿಕೆಗೆ ಮಾಜಿ ಸಂಸದ ಪ್ರೊ. ರಾಜೀವ್ ಗೌಡ ಅಧ್ಯಕ್ಷರಾಗಿದ್ದು, ಕುಸುಮಾ ಹನುಮಂತರಾಯಪ್ಪ ಅವರನ್ನು ಸಹ ಅಧ್ಯಕ್ಷರಾಗಿ ಹಾಗೂ ಮಾಜಿ ಮೇಯರ್ ಜಿ.ಪದ್ಮಾವತಿ ... ಅವರನ್ನು ಸಂಚಾಲಕರಾಗಿ ನೇಮಕ ಮಾಡಲಾಗಿದೆ.

ದಕ್ಷಿಣ ಪಾಲಿಕೆಗೆ ವಿ.ಎಸ್.ಉಗ್ರಪ್ಪ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಅವರನ್ನು ಸಹ ಅಧ್ಯಕ್ಷರಾಗಿ ಹಾಗೂ ಮಾಜಿ ಮೇಯರ್ ಮಂಜುನಾಥ ರೆಡ್ಡಿ ಅವರನ್ನು ಸಂಚಾಲಕರಾಗಿ ನೇಮಿಸಲಾಗಿದೆ. ಬೆಂಗಳೂರು ಕೇಂದ್ರ ಪಾಲಿಕೆಗೆ ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು, ಮಾಜಿ ಮೇಯರ್ ಪಿ.ಆರ್.ರಮೇಶ್ ಸಹ ಅಧ್ಯಕ್ಷ ಹಾಗೂ ಆರ್.ಎಸ್.ಸತ್ಯನಾರಾಯಣ ಅವರನ್ನು ಸಂಚಾಲಕರಾಗಿ ನೇಮಕ ಮಾಡಲಾಗಿದೆ.

ಉತ್ತರ ಪಾಲಿಕೆಗೆ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು, ರಕ್ಷಾ ರಾಮಯ್ಯ ಅವರನ್ನು ಸಹ ಅಧ್ಯಕ್ಷರಾಗಿ ಹಾಗೂ ಮಾಜಿ ಎಂಎಲ್ಸಿ ಆರ್.ವಿ.ವೆಂಕಟೇಶ್ ಅವರನ್ನು ಸಂಚಾಲಕರಾಗಿ ನೇಮಕ ಮಾಡಲಾಗಿದೆ.

ವೈದ್ಯರ ಪುತ್ರಿ ಆತ್ಮಹತ್ಯೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗೆ ದಾಖಲಾಗಿದ್ದ 18 ವರ್ಷದ ವಿದ್ಯಾರ್ಥಿನಿ 10ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕುಂದಲಹಳ್ಳಿಯಲ್ಲಿ ಗುರುವಾರ ರಾತ್ರಿ ನಡೆದಿದೆ.

ವರ್ಷಾ (18) ಆತ್ಮಹತ್ಯೆ ಮಾಡಿಕೊಂಡವರು. ಖಾಸಗಿ ವೈದ್ಯಕೀಯ ಆಸ್ಪತ್ರೆಯ ದಂತ ವೈದ್ಯ ಡಾ.ರಮೇಶ್ ಹಾಗೂ ರೇವತಿ ದಂಪತಿ ಪುತ್ರಿ ವರ್ಷಾ, ಪಿಯುಸಿ ವಿದ್ಯಾಭ್ಯಾಸವನ್ನು ಅತ್ಯುನ್ನತ ಶ್ರೇಣಿಯಲ್ಲಿ ಪೂರ್ಣಗೊಳಿಸಿದ್ದರು. ವೈದ್ಯಳಾಗುವ ಕನಸು ಕಂಡು, ಪ್ರತಿಷ್ಠಿತ ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದರು.

ಗುರುವಾರ ರಾತ್ರಿ ಕುಂದಲಹಳ್ಳಿಯ ಅಪಾರ್ಟ್‌ಮೆಂಟ್‌ನ 10ನೇ ಮಹಡಿ ಬಾಲ್ಕನಿಯಿಂದ ಕೆಳಗೆ ಹಾರಿ ವರ್ಷಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ಯಾವುದೇ ನಿಖರ ಕಾರಣ ಗೊತ್ತಾಗಿಲ್ಲ. ಮಾನಸಿಕ ಖಿನ್ನತೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯಿದೆ. ಅಸಹಜ ಸಾವು ಪ್ರಕರಣ ದಾಖಲಿಸಿರುವ ಎಚ್‌ಎಎಲ್ ಠಾಣೆ ಪೊಲೀಸರು, ಹಲವು ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ವಿಕ ಮನಿ
From The House of THE ECONOMIC TIMES
ಕನ್ನಡದ ಏಕೈಕ ಹಣಕಾಸು ವಾರಪತ್ರಿಕೆ

ಪೆಟ್ರೋಲ್‌ಗೆ ಬೈ EV ಕ್ರಾಂತಿಗೆ ಜೈ

ಹೊಸ ಟ್ರೆಂಡ್ ಬಗ್ಗೆ
ಬಿ. ಸೋಮಶೇಖರ್ ಕವರ್ ಸ್ಟೋರಿ

ಟರ್ಮ್ ಇನ್ಶೂರೆನ್ಸ್ VS ಯುಲಿಪ್ ಯಾವುದು ಬೆಸ್ಟ್?

ಶರತ್ ಎಂ.ಎಸ್. ಗೈಡೆನ್ಸ್

ಮ್ಯೂಚುವಲ್ ಫಂಡ್‌ನಲ್ಲೂ ಡ್ರೀಮ್ ಇಲೆವೆನ್ ಕ್ರಿಕೆಟ್ ಟೀಮ್!
ಶ್ರೀಧರ ಬಾಣಾವರ ಕಾಮೆಂಟರಿ

ಸಂಚಿಕೆಯ ಹೈಲೈಟ್ಸ್

- ಟೈಮ್ ಬಾಂಬ್ ಮೇಲೆ ಕುಳಿತಿದೆ ಅಮೆರಿಕ ಎಕಾನಮಿ: **ರಂಗಸ್ವಾಮಿ ಮೂಕನಹಳ್ಳಿ** ಕಾಲಂ
- ಕ್ರೆಡಿಟ್ ಸ್ಕೋರ್, ಇದು ನಿಮ್ಮ ಹಣಕಾಸು ಆರೋಗ್ಯದ ರಿಪೋರ್ಟ್ ಕಾರ್ಡ್ – **ಡಾ.ಭಾಸ್ಕರ ಅದ್ವೈತ** ಲೇಖನ
- ನಿಮ್ಮ ಉದ್ಯಮದ ಯಶಸ್ಸಿಗೆ **'ಜಿ.ಕೆ. ಪ್ರಮೋದ್'** ಮಾರ್ಕೆಟಿಂಗ್ ಸೂತ್ರಗಳು
- ತೈಲಾಘಾತದ ಪರ್ವ ಶುರು: ಮುಂದಿವೆ ಕಷ್ಟದ ದಿನಗಳು! ಚೇರ್ಕಾಡಿ **ಸಚ್ಚಿದಾನಂದ ಶೆಟ್ಟಿ** ಮುನ್ನೋಟ
- **ಬ್ಯಾಡ್ ಸ್ಟೋರಿ:** ವಿದೇಶದಲ್ಲಿ ಸ್ಟಡಿ; ನಮ್ಮುಡುಗರ ಕನಸಿಗೆ ಬೆಂಕಿ ಹಚ್ಚಿದ ಡಾಲರ್
- ಕಾರ್ಪೊರೇಟ್ ಜಗತ್ತು: ಸಂಕಷ್ಟ ತನಿಖೆಗಳ ಮಧ್ಯೆಯೇ ಅರಳಿದ ಅದಾನಿ ಸಾಮ್ರಾಜ್ಯ–**ರಂಗನಾಥ ನೂಲಿಕರ** ಲೇಖನ
- ವಿಶೇಷ ಸಂದರ್ಶನ: ಬಿಕ್ಕಟ್ಟು ತಾತ್ಕಾಲಿಕ, ದೇಶದ ಬೆಳವಣಿಗೆ ನಿಶ್ಚಿತ– ಜಿಯೊ ಫೈನಾನ್ಶಿಯಲ್ ಸರ್ವಿಸಸ್‌ನ **ಕೆ.ವಿ.ಕಾಮತ್** ವಿಶ್ವಾಸ

ಬೆಲೆ ₹5
ಪತ್ರಿಕೆಗಾಗಿ ಸಂಪರ್ಕಿಸಿ
72594 58080
ಪ್ರತಿ ಭಾನುವಾರ ನಿಮ್ಮ ಕೈ ಸೇರಲಿದೆ
ಪ್ರತಿ ಭಾನುವಾರ ಮಾರುಕಟ್ಟೆಯಲ್ಲಿ ವಿಕ ಮನಿ ಬಿಡುಗಡೆ
ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

ಮುಂದಿನ ಚುನಾವಣೆಗೆ ಸದ್ದಿಲ್ಲದೆ ಪಕ್ಷ ಸಜ್ಜು | ವರಿಷ್ಠರಿಂದ ಕಾರ್ಯಕ್ರಮಗಳ ಟಾರ್ಗೆಟ್

ರಾಜ್ಯ ಬಿಜೆಪಿಗೆ ಈಗ ಹೈಕಮಾಂಡ್ ಶಕ್ತಿ

- ರಾಜ್ಯದ ಪ್ರಮುಖ ನಾಯಕರ ಜತೆ ಸಭೆ
- ಬಿಎಸ್‌ವೈ ಮನೆಯಲ್ಲಿ ಉಪಾಹಾರ
- ರಾಜ್ಯಾಧ್ಯಕ್ಷರ ಕಾರ್ಯವೈಖರಿ ಬಗ್ಗೆ ಮಾಹಿತಿ

ವಿಕ ಸುದ್ದಿಲೋಕ ಬೆಂಗಳೂರು

ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆ ಬಳಿಕ ಕರ್ನಾಟಕದತ್ತ ಗಮನ ಹರಿಸುತ್ತಿದೆ.ಬಿಜೆಪಿ ವರಿಷ್ಠರು ಪಕ್ಷ ಸಂಘಟನೆಗೆ ಬಲ ತುಂಬಿ ಮುಂದಿನ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ಕಾರ್ಯಕ್ಕೆ ಸದ್ದಿಲ್ಲದೆ ಚಾಲನೆ ನೀಡಿದ್ದಾರೆ.

ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿಗೆ ಅಧಿಕಾರದ ಬಾಗಿಲು ತೆರೆದ ಕರ್ನಾಟಕದಲ್ಲಿ ನಾಲ್ಕನೇ ಬಾರಿಗೆ ಅಧಿಕಾರ ಹಿಡಿಯುವ ಲೆಕ್ಕಾಚಾರದೊಂದಿಗೆ ವರಿಷ್ಠರು ಸಂಘಟನೆಗೆ ಬಲ ತುಂಬುವ ಕಾರ್ಯ ಆರಂಭಿಸಿದ್ದಾರೆ.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು 50 ವರ್ಷ ರಾಜಕೀಯ ಜೀವನ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಅವರಿಗೆ ಗೌರವ ಸಲ್ಲಿಸಲು ನಡೆದ ಬಿಎಸ್‌ವೈ ಅಭಿಮಾನೋತ್ಸವದ ಯಶಸ್ವಿ ಆಚರಣೆ ಬೆನ್ನಿಗೆ ವರಿಷ್ಠರು ರಾಜ್ಯ ಬಿಜೆಪಿಯನ್ನು ಇನ್ನಷ್ಟು ಸಕ್ರಿಯಗೊಳಿಸಲು ಕೈ ಹಾಕಿರುವುದು ಗಮನ ಸೆಳೆದಿದೆ.

ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಾರ್ಯ ವೈಖರಿ ಕುರಿತಂತೆ ಸದ್ದಿಲ್ಲದೆ ಅಭಿಪ್ರಾಯ ಸಂಗ್ರಹಿಸಿದ ಕೇಂದ್ರ ನಾಯಕರು ಕರ್ನಾಟಕದ ಮುಂಬರುವ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿರುವ ಸಂದೇಶ ಸಾರಿದ್ದಾರೆ. ಮುಂದಿನ ಹಂತದ ಮೌಲ್ಯಮಾಪನ ಇನ್ನಷ್ಟು ಬಿಗಿಯಾಗಿ ನಡೆಯುವ ಸುಳಿವನ್ನು ರಾಜ್ಯ ನಾಯಕರಿಗೆ ನೀಡಿದಂತಾಗಿದೆ. ಹಾಗಾಗಿ ಎಲ್ಲರೂ ಭಿನ್ನಾಭಿಪ್ರಾಯ ಮರೆತು ಪಕ್ಷದ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗುತ್ತಿರುವುದು ಕಾಣುತ್ತಿದೆ.

ಈವರೆಗೆ ಕೇಂದ್ರ ಬಿಜೆಪಿಯು ರಾಜ್ಯ ಬಿಜೆಪಿಗೆ ನೀಡಿದ ಸಂಘಟನಾ ಚಟುವಟಿಕೆಗಳ ಪ್ರಗತಿ, ಫಲಿತಾಂಶಗಳನ್ನು ಪರಿಶೀಲಿಸುತ್ತಿರುವ ಕೇಂದ್ರ ನಾಯಕರು ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚು ಚಟುವಟಿಕೆಗಳನ್ನು ನೀಡುವ ನಿರೀಕ್ಷೆ ಇದೆ. ಹಾಗೆಯೇ ಚುನಾವಣೆ ಗೆಲ್ಲುವ ದೃಷ್ಟಿಯಿಂದ ಕಾರ್ಯಕ್ರಮಗಳ ಟಾರ್ಗೆಟ್ ನೀಡಲಿದ್ದು, ಅದಕ್ಕೆ ರಾಜ್ಯ ಬಿಜೆಪಿ ಹೇಗೆ ಸ್ಪಂದಿಸಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಬೆಂಗಳೂರಿಗೆ ನಿತಿನ್ ನಬಿನ್: ಈ ನಡುವೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಮೊದಲ ಬಾರಿಗೆ ಶನಿವಾರ ರಾತ್ರಿ ಬೆಂಗಳೂರಿಗೆ ಆಗಮಿಸಲಿದ್ದಾರೆ.

ಎಸ್‌ಐಆರ್ ಕುರಿತು ಸಭೆ

ಸಂಜೆ 4 ಗಂಟೆಗೆ ಯಲಹಂಕ ಬಳಿಯ ರಮಡಾ ಹೋಟೆಲ್‌ನಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಪ್ರಶಿಕ್ಷಣ ವರ್ಗದಲ್ಲಿ ಸಮಾರೋಪ ಭಾಷಣವನ್ನು ನಿತಿನ್ ನವೀನ್ ಅವರು ಮಾಡಲಿದ್ದಾರೆ. ಬಳಿಕ ಪ್ರಮುಖರೊಂದಿಗೆ ಕರ್ನಾಟಕದಲ್ಲಿ ನಡೆಯುವ ಎಸ್‌ಐಆರ್ ಪ್ರಕ್ರಿಯೆ ಕುರಿತಂತೆ ಮಹತ್ವದ ಸಮಾಲೋಚನೆ ನಡೆಸಲಿದ್ದಾರೆ. ಸೋಮವಾರ ನಿರ್ಗಮಿಸಲಿದ್ದಾರೆ.

ಭಾನುವಾರ ಬೆಳಗ್ಗೆ 8 ಗಂಟೆ ಹೊತ್ತಿಗೆ ಯಡಿಯೂರಪ್ಪ ನಿವಾಸಕ್ಕೆ ಭೇಟಿ ನೀಡಿ ಉಪಾಹಾರ ಸೇವಿಸಲಿದ್ದಾರೆ. ಬಳಿಕ ರಾಜ್ಯ ಕಚೇರಿಗೆ ಭೇಟಿ ನೀಡಲಿರುವ ರಾಷ್ಟ್ರೀಯ ಅಧ್ಯಕ್ಷರಿಗೆ ಭರ್ಜರಿ ಸ್ವಾಗತ ನೀಡಲು ಪಕ್ಷ ಸಿದ್ಧತೆ ಮಾಡಿಕೊಂಡಿದೆ.

ಬೆಳಗ್ಗೆ 10.30ಕ್ಕೆ ರಾಜ್ಯದ ಸಂಸದರು, ಶಾಸಕರು, ಎಂಎಲ್ಸಿಗಳು, ರಾಜ್ಯ ಪದಾಧಿಕಾರಿಗಳೊಂದಿಗೆ ನಿತಿನ್ ನಬಿನ್ ಅವರು ಮಹತ್ವದ ಸಭೆ ನಡೆಸಲಿದ್ದಾರೆ. ಪಕ್ಷ ಸಂಘಟನೆ, ಚುನಾವಣೆ ತಯಾರಿಯ ಸಭೆ ನಡೆಸಲಿದ್ದಾರೆ. ನಂತರ ರಾಜ್ಯ ಬಿಜೆಪಿ ಕೋರ್ ಕಮಿಟಿ ಸಭೆ ನಡೆಯಲಿದ್ದು, ಮುಂಬರುವ ಸ್ಥಳೀಯ ಹಾಗೂ ವಿಧಾನಸಭೆ ಚುನಾವಣೆ ಸಿದ್ಧತೆ ಕುರಿತಂತೆ ಸಮಾಲೋಚನೆ ನಡೆಸುವ ಸಾಧ್ಯತೆ ಇದೆ.

ಅತಿಥಿ ಶಿಕ್ಷಕರ ನೇಮಕಕ್ಕೆ ಆದೇಶ

ಪ್ರಾಥಮಿಕ 40,000, ಪ್ರೌಢಶಾಲೆಗೆ 11,000ಶಿಕ್ಷಕರು

ವಿಕ ಸುದ್ದಿಲೋಕ ಬೆಂಗಳೂರು

2026–27ನೇ ಶೈಕ್ಷಣಿಕ ವರ್ಷ ಆರಂಭಕ್ಕೂ ಮೊದಲೇ ರಾಜ್ಯದ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿನ ಶಿಕ್ಷಕರ ಕೊರತೆ ಸರಿದೂಗಿಸಲು ಸರಕಾರ ಸಜ್ಜಾಗಿದೆ. ನೂತನ ಶೈಕ್ಷಣಿಕ ವರ್ಷದಿಂದ ಮಕ್ಕಳ ವ್ಯಾಸಂಗಕ್ಕೆ ಅಡ್ಡಿಯಾಗದಂತೆ ಕ್ರಮ ವಹಿಸಲಾಗಿದ್ದು, 51000 ಅತಿಥಿ ಶಿಕ್ಷಕರ ನೇಮಕಾತಿಗೆ ಸರಕಾರ ಅಧಿಕೃತ ಆದೇಶ ಹೊರಡಿಸಿದೆ.

ಪ್ರಾಥಮಿಕ ಶಾಲೆಗಳಿಗೆ 40 ಸಾವಿರ ಅತಿಥಿ ಶಿಕ್ಷಕರು ಹಾಗೂ ಪ್ರೌಢಶಾಲೆಗಳಿಗೆ 11 ಸಾವಿರ ಅತಿಥಿ ಶಿಕ್ಷಕರು ಸೇರಿ ಒಟ್ಟು 51000 ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಸರಕಾರ ಅನುಮತಿ ನೀಡಿದೆ. ಕಾಯಂ ಶಿಕ್ಷಕರು ನೇಮಕವಾಗುವವರೆಗೆ ಅಥವಾ ಶೈಕ್ಷಣಿಕ ವರ್ಷ ಮುಗಿಯುವವರೆಗೆ ಈ ನೇಮಕಾತಿ ಚಾಲ್ತಿಯಲ್ಲಿರಲಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಜೂ. 1ರಿಂದ ಶಾಲೆಗಳು ಆರಂಭವಾಗುತ್ತಿರುವುದರಿಂದ ಮೊದಲ ದಿನದಿಂದಲೇ ಶೈಕ್ಷಣಿಕ ಚಟುವಟಿಕೆಗಳಿಗೆ ಅಡ್ಡಿಯಾಗದಂತೆ ಅತಿಥಿ ಶಿಕ್ಷಕರ ನೇಮಕಕ್ಕೆ ಶಾಲಾ ಶಿಕ್ಷಣ ಇಲಾಖೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಅಂಗೀಕರಿಸಿ ಸರಕಾರ ಅನುಮತಿ ನೀಡಿದೆ.

ನೇಮಕವಾಗುವ ಒಟ್ಟು 51000 ಅತಿಥಿ ಶಿಕ್ಷಕರ ಗೌರವಧನ ಪಾವತಿಗಾಗಿ ಜಿಲ್ಲಾ ಹಾಗೂ ತಾಲೂಕುವಾರು ವಿವರಗಳನ್ನು ಹೊಸ ಪ್ರಸ್ತಾವನೆ ಮೂಲಕ ಸಲ್ಲಿಸುವಂತೆ ಶಿಕ್ಷಣ ಇಲಾಖೆಗೆ ಸೂಚನೆ ನೀಡಲಾಗಿದೆ. ಕಳೆದ ವರ್ಷ ಕೂಡ ಸರಕಾರ ಇದೇ ಮಾದರಿಯಲ್ಲಿ 51000 ಅತಿಥಿ ಶಿಕ್ಷಕರನ್ನು ಒದಗಿಸಿತ್ತು. ಈ ಬಾರಿಯೂ ಶೈಕ್ಷಣಿಕ ವರ್ಷದ ಆರಂಭದಲ್ಲೇ ಅತಿಥಿ ಶಿಕ್ಷಕರ ನೇಮಕಕ್ಕೆ ಅವಕಾಶ ನೀಡಿರುವುದರಿಂದ ಗ್ರಾಮೀಣ ಹಾಗೂ ನಗರ ಭಾಗದಲ್ಲಿ ಸರಕಾರಿ ಶಾಲೆಗಳಲ್ಲಿರುವ ಶಿಕ್ಷಕರ ಕೊರತೆ ಸರಿದೂಗುವ ನಿರೀಕ್ಷೆಯಿದೆ. ಅತಿಥಿ ಶಿಕ್ಷಕರ ನೇಮಕಾತಿಯಿಂದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷದ ಆರಂಭದಿಂದಲೇ ನಿರಂತರ ಕಲಿಕೆಗೆ ಅವಕಾಶ ಸಿಗಲಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಸುಧಾರಿಸುವ ನಿರೀಕ್ಷೆಯಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಿಕ್ಷಣ ಉಪಾಧ್ಯಾಯರ ಸಂಘದ ಪದಾಧಿಕಾರಿಗಳು ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿ ಸಮಾಲೋಚಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ ಉಪಸ್ಥಿತರಿದ್ದರು.

ಒಂದು ವರ್ಷ 4 ತಿಂಗಳ ಮಗುವಿನ ಕಣ್ಣು ದಾನ

ದೊಡ್ಡಬಳ್ಳಾಪುರ(ಬೆಂ. ಗ್ರಾಮಾಂತರ): ದೊಡ್ಡಬಳ್ಳಾಪುರ ನಗರದ ದೇವರಾಜನಗರದ ನಿವಾಸಿಗಳಾದ ಭರತ್ ಅವರ 1 ವರ್ಷ 4 ತಿಂಗಳ ಮಗನಾದ ಪೋಷಕ್ ಆರೋಗ್ಯದ ವ್ಯತ್ಯಯದಿಂದ ಮೃತಪಟ್ಟ ಹಿನ್ನಲೆ ಅವರ ಕಣ್ಣುಗಳನ್ನು ದಾನ ಮಾಡಲಾಗಿದೆ.

ಇವರು ದೊಡ್ಡಬಳ್ಳಾಪುರದ ನೇತ್ರದಾನಿಗಳ ಪೈಕಿ ಅತ್ಯಂತ ಕಿರಿಯ ವಯಸ್ಸಿನ ನೇತ್ರದಾನಿಯಾಗಿ ದಾಖಲಾಗಿದ್ದಾರೆ. ಅವರ ಕಣ್ಣುಗಳನ್ನು ಡಾ.ರಾಜ್ ಕುಮಾರ್ ನೇತ್ರಸಂಗ್ರಹಣಾ ಕೇಂದ್ರಕ್ಕೆ ದಾನ ಮಾಡಲಾಗಿದೆ. ಸಾವಿನಲ್ಲೂ ಅವರ ತಂದೆ ತಾಯಿ ಮತ್ತು ಅವರ ಕುಟುಂಬದವರು ಮಾನವೀಯತೆ ಮೆರೆದಿದ್ದಾರೆ. ಈ ನೇತ್ರದಾನದ ಮೂಲಕ ದೊಡ್ಡಬಳ್ಳಾಪುರದಲ್ಲಿ ಇದುವರೆಗೆ 2874 ನೇ ನೇತ್ರದಾನ ನಡೆದಿದೆ.

ನೆಫ್ರೋ ಆಸ್ಪತ್ರೆ ನಿರ್ಮಾಣಕ್ಕೆ ಸೂಚನೆ

ವಿಕ ಸುದ್ದಿಲೋಕ ಬೆಂಗಳೂರು

ಬೆಂಗಳೂರಿನ ಸಜ್ಜೆಪಾಳ್ಯದಲ್ಲಿ 5 ಎಕರೆಯಲ್ಲಿ ನೆಫ್ರೋ ಯೂರಾಲಜಿ ಸಂಸ್ಥೆಯ ಆಸ್ಪತ್ರೆ ನಿರ್ಮಾಣಕ್ಕೆ ಕ್ರಮ ವಹಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಸೂಚಿಸಿದ್ದಾರೆ.

ವಿಧಾನಸೌಧದಲ್ಲಿ ಶುಕ್ರವಾರ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ನೆಫ್ರೋ ಯೂರಾಲಜಿ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ನೆಫ್ರೋ ಯೂರಾಲಜಿ ಆಸ್ಪತ್ರೆ ಸೌಲಭ್ಯ, ನೂತನ ಆಸ್ಪತ್ರೆ ನಿರ್ಮಾಣ ಬಗ್ಗೆ ಚರ್ಚಿಸಲಾಯಿತು.

ಸಿಎಂ ಸಿದ್ದರಾಮಯ್ಯ ಅವರು, ಸಂಪುಟ ಸಭೆಯಲ್ಲಿ ಅಂಗೀಕಾರವಾಗಿರುವಂತೆ 5 ಎಕರೆ ಪ್ರದೇಶದಲ್ಲಿ ಸುಸಜ್ಜಿತ ಆಸ್ಪತ್ರೆ ನಿರ್ಮಿಸಬೇಕು. ಈಗಾಗಲೇ ಸಮಾಜ ಕಲ್ಯಾಣ ಇಲಾಖೆಯಿಂದ 3 ಎಕರೆ ಪಡೆದು ಉಳಿದ ಎರಡು ಎಕರೆ ಜಾಗ ಒದಗಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಮುಂದಿನ ವರ್ಷ ನಿರ್ಮಾಣಕ್ಕೆ ಚಾಲನೆ ನೀಡುವಂತೆ ಸೂಚಿಸಿದರು ಎಂದು ಮೂಲಗಳು ತಿಳಿಸಿವೆ.

ಮೈಸೂರಿನಲ್ಲಿ 75 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ನೂತನ ನೆಫ್ರೋ ಯೂರಾಲಜಿ ಆಸ್ಪತ್ರೆ ಕಟ್ಟಡವನ್ನು 6 ತಿಂಗಳಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರ ಸೇವೆಗೆ ಸಮರ್ಪಣೆ ಮಾಡಬೇಕು ಎಂದು ಸೂಚಿಸಿದ್ದಾರೆ ಎಂದು ಗೊತ್ತಾಗಿದೆ.

ನೆಫ್ರೋ ಯೂರಾಲಜಿ ಸಂಸ್ಥೆ ನಿರ್ದೇಶಕ ಡಾ.ಎಂ.ಶಿವಲಿಂಗಯ್ಯ ಆಸ್ಪತ್ರೆಯ ಸಾಧನೆಗಳ ಬಗ್ಗೆ ವಿವರಿಸಿದರು. ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ನಮಾಜ್ ಮಾಡಿ ಸಂಪುಟ ಸಭೆ ಸಾಧ್ಯತೆ: ಸುನೀಲ್ ಆತಂಕ

ವಿಕ ಸುದ್ದಿಲೋಕ ಬೆಂಗಳೂರು

ಗಲಭೆ ನಡೆಸಿದವರ ವಿರುದ್ಧದ ಕೇಸ್ ವಾಪಸ್ ಸರಿಯಲ್ಲ

ಗಲಭೆ ನಡೆಸಿದವರ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯಲು ಸಂಪುಟ ಸಭೆಯಲ್ಲಿ ತೀರ್ಮಾನಿಸಿರುವುದು ಸರಿಯಲ್ಲ ಎಂದು ಮಾಜಿ ಸಚಿವ ವಿ.ಸುನೀಲ್ ಕುಮಾರ್ ಆಕ್ಷೇಪಿಸಿದ್ದಾರೆ.

ವಿಧಾನಸೌಧದಲ್ಲಿ ಶುಕ್ರವಾರ ಮಾತನಾಡಿ, ''ರೈತ, ಕನ್ನಡ, ದಲಿತ ಹೋರಾಟ ವಿಚಾರ ಬಂದಾಗ ಪ್ರಕರಣಗಳನ್ನು ಹಿಂಪಡೆಯುವುದನ್ನು ಎಲ್ಲ ಸರಕಾರಗಳು ಮಾಡಿವೆ. ಆದರೆ ಯಾರು ಗಲಭೆ ಮಾಡಿದ್ದಾರೋ ಅಂತಹ ಎಸ್‌ಡಿಪಿಐ ಕಾರ್ಯಕರ್ತರ ವಿರುದ್ಧದ ಪ್ರಕರಣಗಳನ್ನು ಹಿಂಪಡೆದಿರುವುದು ಯಾವ ಪುರುಷಾರ್ಥಕ್ಕೆ? ಸರಕಾರ ಯಾವ ಸಂದೇಶ ನೀಡುತ್ತಿದೆ,'' ಎಂದು ಪ್ರಶ್ನಿಸಿದರು.

''ಮುಸ್ಲಿಮರು ಕಾಂಗ್ರೆಸ್‌ನಿಂದ ದೂರವಾಗುತ್ತಿದ್ದಾರೆಂಬ ಕಾರಣಕ್ಕೆ ಈ ರೀತಿಯ ಓಲೈಕೆ ರಾಜಕಾರಣ ಸರಿಯಲ್ಲ. ಬಾಂಗ್ಲಾ ದೇಶಿಗರಿಗೆ ರಕ್ಷಣೆ ನೀಡಿ ಮನೆ ನಿರ್ಮಿಸಿ ಕೊಡಲು ಮುಂದಾಗುವುದು. ಗಂಭೀರ ಅಪರಾಧ ಪ್ರಕರಣಗಳನ್ನು ಹಿಂಪಡೆಯುವುದು ಕೂಡ ಓಲೈಕೆ ರಾಜಕಾರಣವೇ. ಈ ಸರಕಾರ ನಮಾಜ್ ಮಾಡಿ ನಂತರ ಸಂಪುಟ ಸಭೆ ಆರಂಭಿಸಬಹುದು,'' ಎಂದು ಆಕ್ರೋಶ ವ್ಯಕ್ತಪಡಿಸಿದರು.

''ಬೇರೆ ರಾಜ್ಯಗಳಲ್ಲಿ ಯಾರೆಲ್ಲಾ ಓಲೈಕೆ ರಾಜಕಾರಣ ಮಾಡಿದ್ದಾರೋ ಅಲ್ಲೆಲ್ಲಾ ಜನ ಅವರನ್ನು ತಿರಸ್ಕರಿಸಿದ್ದಾರೆ. 2028ರಲ್ಲಿ ರಾಜ್ಯದಲ್ಲೂ ಜನ ತಿರಸ್ಕರಿಸಲಿದ್ದಾರೆ,'' ಎಂದರು.

ನಿವಾಸಕ್ಕೆ ಅಶೋಕ್ 7ನೇ ಪತ್ರ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ರಚನೆಯಾಗಿ ಮೂರು ವರ್ಷ ಕಳೆದರೂ ವಿಧಾನಸಭೆ ಪ್ರತಿಪಕ್ಷ ನಾಯಕರಿಗೆ ಅಧಿಕೃತ ಸರಕಾರಿ ವಸತಿ ಗೃಹ ಹಂಚಿಕೆ ಮಾಡದಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಆರ್. ಅಶೋಕ್ ಅವರು ಏಪ್ರಿಲ್ ತಿಂಗಳ ಮನೆ ಬಾಡಿಗೆ ಭತ್ಯೆ ಪಡೆಯದೆ ಪ್ರತಿಭಟಿಸುವ ಮೂಲಕ ಸರಕಾರಿ ನಿವಾಸ ಹಂಚಿಕೆಗೆ ಆಗ್ರಹಿಸಿದ್ದಾರೆ.

ಈ ಸಂಬಂಧ ಶುಕ್ರವಾರ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದು, ಇದು ಏಳನೇ ಪತ್ರವಾಗಿದೆ. ''ಈವರೆಗೆ ನನ್ನ ಆದ್ಯತೆಯ ಸರಕಾರಿ ವಸತಿಗೃಹವನ್ನು ಹಂಚಿಕೆ ಮಾಡಿಲ್ಲ,'' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

''ನನ್ನ ಆದ್ಯತೆಯ ಸರಕಾರಿ ವಸತಿ ಗೃಹಗಳಾದ ನಂ.1, ಕುಮಾರ ಕೃಪಾ ಪೂರ್ವ, ನಂ.1, ರೇಸ್ ವ್ಯೂ ಕಾಟೇಜ್ ಹಾಗೂ ನಂ. 2, ರೇಸ್ ವ್ಯೂ ಕಾಟೇಜ್ ಪೈಕಿ ಯಾವುದಾದರೂ ಒಂದು ಹಂಚಿಕೆ ಮಾಡದಿದ್ದರೆ ಇನ್ನು ಮುಂದೆ ನಾನು ಮನೆ ಬಾಡಿಗೆ ಭತ್ಯೆ ಪಡೆಯುವುದಿಲ್ಲ ಎಂದು ತಿಳಿಸಿದ್ದೆ. ಹಾಗಿದ್ದರೂ ನನ್ನ ಮನವಿಗೆ ಸ್ಪಂದಿಸದ ಕಾರಣ 2026ರ ಏಪ್ರಿಲ್ ತಿಂಗಳ ಮನೆ ಬಾಡಿಗೆ ಭತ್ಯೆ ಪಡೆಯದೆ ಪ್ರತಿಭಟಿಸುತ್ತಿದ್ದೇನೆ,'' ಎಂದು ಹೇಳಿದ್ದಾರೆ.

ಕಾಕ್ರೋಚ್ ಪಾರ್ಟಿಗೆ ಡಿಕೆಶಿ ಅಧ್ಯಕ್ಷರಾಗಲಿ

ಬೆಂಗಳೂರು: ''ಸೋಶಿಯಲ್ ಮೀಡಿಯಾದಲ್ಲಿ ಎದ್ದಿರುವ 'ಕಾಕ್ರೋಚ್ ಜನತಾ ಪಾರ್ಟಿ'ಗೆ ಡಿ.ಕೆ. ಶಿವಕುಮಾರ್ ಅಧ್ಯಕ್ಷರಾಗಿ, ಸಾಧನೆ ತೋರಿಸಲಿ,'' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಆ ಸಂಘಟನೆ ಕಟ್ಟಿ, ಕನಿಷ್ಠ 50 ಸೀಟು ಗೆದ್ದು ಸಾಮರ್ಥ್ಯ ತೋರಿಸಲಿ,'' ಎಂದು ಸವಾಲು ಹಾಕಿದರು.

ಡಿಸಿಎಂಗೆ ತಿರುಗೇಟು: ''ನನ್ನ ಸ್ಟೇಟಸ್ ಬಗ್ಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಪ್ರಶ್ನೆ ಎತ್ತಿದ್ದಾರೆ. ಕನ್ನಡಿಗ ಅನ್ನೋದೆ ನನ್ನ ಸ್ಟೇಟಸ್. ಇಲ್ಲಿ ನಾನು ತೆರಿಗೆ ಕಟ್ಟುತ್ತಿದ್ದೇನೆ ಮತ್ತು ರಾಜ್ಯದ ಜನರ ಪರವಾಗಿ ಪ್ರಶ್ನೆ ಕೇಳಿದ್ದೇನೆ,'' ಎಂದು ನಿಖಿಲ್ ತಿರುಗೇಟು ನೀಡಿದರು. ''ಗೃಹಲಕ್ಷ್ಮಿಯ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಹಣ 5 ಸಾವಿರ ಕೋಟಿ ಏನಾಯಿತು? ಈ ಬಗ್ಗೆ ಸಿಎಂ, ಡಿಸಿಎಂ ಉತ್ತರ ಕೊಡಬೇಕು,'' ಆಗ್ರಹಿಸಿದ್ದಾರೆ.

ಎಬೋಲಾ: ಮಾರ್ಗಸೂಚಿ ಪ್ರಕಟ

ಬೆಂಗಳೂರು: ಆಫ್ರಿಕಾ ದೇಶಗಳಾದ ಕಾಂಗೋ ಹಾಗೂ ಉಗಾಂಡಾಗಳಲ್ಲಿ ಎಬೋಲಾ ವೈರಸ್ ಸೋಂಕು ಆತಂಕ ಸೃಷ್ಟಿಸಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನಿಗಾ ವಹಿಸಲಾಗಿದ್ದು, ಪ್ರತ್ಯೇಕ ಕ್ವಾರಂಟೈನ್ ಮತ್ತು ಐಸೋಲೇಷನ್ ಸೌಲಭ್ಯದ ಜತೆಗೆ ಆರೋಗ್ಯ ಸಿಬ್ಬಂದಿಗೆ ತರಬೇತಿ ನೀಡಲು ಆರೋಗ್ಯ ಇಲಾಖೆ ಕ್ರಮ ವಹಿಸಿದೆ.

- **ಬೆಂಗಳೂರು, ಮಂಗಳೂರಲ್ಲಿ ಐಸೋಲೇಷನ್, ಕ್ವಾರಂಟೈನ್, ಚಿಕಿತ್ಸಾ ಕೇಂದ್ರ ಗುರುತು**

ಸಂಶಯಾಸ್ಪದ ರೋಗಿಗಳನ್ನು ಆಸ್ಪತ್ರೆಗೆ ಸಾಗಿಸಲು ನಿಗದಿತ ಆಂಬ್ಯುಲೆನ್ಸ್ ಸೇವೆಯನ್ನೂ ಸಿದ್ಧವಾಗಿಡಲಾಗಿದೆ. ಸಂಶಯಾಸ್ಪದ ಎಬೋಲಾ ಪ್ರಕರಣಗಳ ಮಾದರಿಗಳನ್ನು ಸಂಗ್ರಹಿಸಿ, ಬೆಂಗಳೂರಿನ ಎನ್‌ಐವಿ ಮೂಲಕ ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆಗೆ ಕಳುಹಿಸಲು ನಿರ್ಧರಿಸಲಾಗಿದೆ.

ಎಚ್ಚರಿಕೆ ವಹಿಸಿ: ಜನತೆ ಅನಗತ್ಯ ಆತಂಕಕ್ಕೆ ಒಳಗಾಗಬಾರದು. ಎಬೋಲಾಪೀಡಿತ ದೇಶಗಳಿಗೆ ಇತ್ತೀಚೆಗೆ ಪ್ರಯಾಣ ಮಾಡಿದವರು ಭಾರತಕ್ಕೆ ಮರಳಿದ ನಂತರ 21 ದಿನಗಳ ಕಾಲ ಆರೋಗ್ಯ ಮೇಲ್ವಿಚಾರಣೆ ಹಾಗೂ ಪ್ರತ್ಯೇಕ ನಿಗಾದಲ್ಲಿರಬೇಕು. ತುರ್ತು ಪ್ರತಿಕ್ರಿಯಾ ತಂಡ ಈ ಸಂಬಂಧ ಸರ್ವೇಕ್ಷಣಾ ಕಾರ್ಯ ಮಾಡಲಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಎಬೋಲಾ ರೋಗ ಲಕ್ಷಣ: ಎಬೋಲಾ ಗಂಭೀರ ವೈರಲ್ ಸೋಂಕಾಗಿದ್ದು, ಜ್ವರ, ತಲೆನೋವು, ಸ್ನಾಯು, ಗಂಟಲು ನೋವು, ವಾಂತಿ, ತೀವ್ರ ಅತಿಸಾರ, ಹೊಟ್ಟೆ ನೋವು, ದದ್ದು ಹಾಗೂ ಕಣ್ಣು ಕೆಂಪಾಗುವುದು ಮುಂತಾದ ಲಕ್ಷಣಗಳು ಇರಲಿವೆ. ಸೋಂಕಿತ ವ್ಯಕ್ತಿಗಳ ರಕ್ತ, ಅಂಗಗಳು, ದೇಹ ದ್ರವಗಳೊಂದಿಗೆ ನೇರ ಸಂಪರ್ಕ ಅಥವಾ ಹಾಸಿಗೆ, ಬಟ್ಟೆ, ಸಿರಿಂಜ್‌ನಂತಹ ಕಲುಷಿತ ವಸ್ತುಗಳ ಸಂಪರ್ಕದಿಂದ ರೋಗ ಹರಡುತ್ತದೆ. ಆರೋಗ್ಯ ಸಿಬ್ಬಂದಿ ಮತ್ತು ಸೋಂಕಿತ ವ್ಯಕ್ತಿಯ ಕುಟುಂಬ ಸದಸ್ಯರು, ನಿಕಟ ಸಂಪರ್ಕದಲ್ಲಿರುವವರು ಹೆಚ್ಚಿನ ಅಪಾಯಕ್ಕೆ ಸಿಲುಕುವ ಸಾಧ್ಯತೆ ಹೆಚ್ಚು.

ಎರಡು ಕ್ರಿಮಿನಲ್ ಪ್ರಕರಣ ಹಿಂಪಡೆದು ಮೂಗಿಗೆ ತುಪ್ಪ

ವಿಕ ಸುದ್ದಿಲೋಕ ಬೆಂಗಳೂರು

ಕರವೇ ನಾರಾಯಣಗೌಡ ಅಸಮಾಧಾನ

ರಾಜ್ಯ ಸಚಿವ ಸಂಪುಟ ಕೆಲವು ಪ್ರಕರಣಗಳನ್ನು ಹಿಂಪಡೆಯಲು ಕೈಗೊಂಡ ನಿರ್ಧಾರದ ಬಗ್ಗೆ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಾಧ್ಯಮ ವರದಿಗಳನ್ನು ಉಲ್ಲೇಖಿಸಿ ಪ್ರತಿಕ್ರಿಯೆ ನೀಡಿರುವ ಅವರು, ''ನಾವ್‌ಕೇವಾಸ್ತೆಗೆ ಎರಡು ಪ್ರಕರಣಗಳನ್ನು ಹಿಂಪಡೆದಿದ್ದಾರೆ. ಮೂಗಿಗೆ ತುಪ್ಪ ಹಚ್ಚೋದು ಅಂದ್ರೆ ಇದೇನಾ? ಆ ಎರಡು ಪ್ರಕರಣಗಳನ್ನಾದರೂ ಯಾಕೆ ಹಿಂಪಡೆದಿರಿ,'' ಎಂದು ಸರಕಾರಕ್ಕೆ ಪ್ರಶ್ನೆ ಮಾಡಿದ್ದಾರೆ.

''ಹಲವಾರು ವರ್ಷಗಳಿಂದ ಕನ್ನಡ ಹೋರಾಟಗಾರರ ವಿರುದ್ಧ ಹೂಡಲಾಗಿರುವ ಸಾವಿರಾರು ಪ್ರಕರಣಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಕೇಳುತ್ತಲೇ ಬಂದಿದ್ದೇವೆ. ಸ್ವತಃ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಆಗಾಗ್ಗೆ ಎಲ್ಲ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವುದಾಗಿ ಹೇಳುತ್ತಾ ಬಂದಿದ್ದಾರೆ. ನಾನೇ ಖುದ್ದಾಗಿ ಮುಖ್ಯಮಂತ್ರಿ, ಗೃಹ ಸಚಿವ, ಕಾನೂನು ಸಚಿವರನ್ನು ಭೇಟಿಯಾಗಿ ಮಾತನಾಡಿದ್ದೆ. ರಾಜ್ಯ ಸಚಿವ ಸಂಪುಟ ನಿನ್ನೆ ಹಲವು ಪ್ರಕರಣಗಳನ್ನು ಹಿಂದಕ್ಕೆ ಪಡೆದಿದೆ. ಆ ಪೈಕಿ ಒಂದೆರಡು ನನಗೆ ಸಂಬಂಧಿಸಿದ್ದಾಗಿವೆ ಎಂಬುದರ ಕುರಿತು ಮಾಧ್ಯಮಗಳ ಮೂಲಕ ಗಮನಿಸಿದೆ. ನನ್ನ ಮೇಲೆ ಒಟ್ಟು 27 ಪ್ರಕರಣಗಳು ಇವೆ. ಎಲ್ಲವೂ ಚಳವಳಿಯ ಪ್ರಕರಣಗಳು. ಯಾರಿಗೋ ಹೊಡೆದ, ಬಡಿದ ಪ್ರಕರಣಗಳು ಅಲ್ಲ, ಸಮಾಜದಲ್ಲಿ ಸಂಘರ್ಷಕ್ಕೆ ಕಾರಣವಾದ ಪ್ರಕರಣಗಳಂತೂ ಅಲ್ಲವೇ ಅಲ್ಲ. ಕರವೇ ಕಾರ್ಯಕರ್ತರ ಮೇಲೆ ರಾಜ್ಯಾದ್ಯಂತ ನೂರಾರು ಪ್ರಕರಣಗಳನ್ನು ಹೂಡಲಾಗಿದೆ. ಅವುಗಳ ಸಂಪೂರ್ಣ ವಿವರಗಳನ್ನು ಸಹ ಸರಕಾರಕ್ಕೆ ನೀಡಿದ್ದೇವೆ. ಆದರೆ ಇದ್ಯಾವುದೂ ಸರಕಾರದ ಕಣ್ಣಿಗೆ ಬಿದ್ದಿಲ್ಲ, ಜಾಣ ಕುರುಡು ಪ್ರದರ್ಶಿಸಿದೆ,'' ಎಂದರು.

''ಕನ್ನಡ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ಹಿಂದಕ್ಕೆ ಪಡೆಯಬಾರದು ಎಂಬ ಕುತಂತ್ರವನ್ನು ಯಾರು ಹೆಣೆಯುತ್ತಿದ್ದಾರೆ, ಇದರ ಹಿಂದೆ ಯಾರಿದ್ದಾರೆ ಅನ್ನುವುದೂ ಕೂಡ ನಮಗೆ ಗೊತ್ತಿದೆ. ಸಚಿವ ಸಂಪುಟವನ್ನು ದಾರಿ ತಪ್ಪಿಸುವ ಐಎಎಸ್, ಐಪಿಎಸ್ ಬಾಬುಗಳ ಕುರಿತೂ ನಮಗೆ ಚೆನ್ನಾಗಿ ಅರಿವಿದೆ. ಯಾರು ಯಾರಿಗೆ ಯಾವ ಸಂದರ್ಭದಲ್ಲಿ ಉತ್ತರ ಕೊಡಬೇಕೋ ಕೊಟ್ಟೆ ಕೊಡುತ್ತೇವೆ. ಯಾವುದನ್ನೂ ಬಾಕಿ ಇರಿಸಿಕೊಳ್ಳುವುದಿಲ್ಲ, ಆ ಕಾಲಕ್ಕೆ ಕಾಯುತ್ತಿದ್ದೇವೆ,'' ಎಂದು ತಿಳಿಸಿದ್ದಾರೆ.

ಮಲೆನಾಡಿನ ಮರಗಂತಿ ಕಪ್ಪೆಗೆ ಉಭಯಜೀವಿ ಪಟ್ಟ; ಸಚಿವ ಈಶ್ವರ ಖಂಡ್ರೆ

ಅರಣ್ಯ ಭೂಮಿ ವಶಕ್ಕೆ ಕಾನೂನು ಹೋರಾಟ

ವಿಕ ಸುದ್ದಿಲೋಕ ಬೆಂಗಳೂರು

ಎಚ್‌ಎಂಟಿ, ವಾಯುಪಡೆ, ಖಾಸಗಿ ರಬ್ಬರ್ ತೋಟ ಕಂಪನಿಗಳ ವಶದಲ್ಲಿರುವ ಸುಮಾರು 50 ಸಾವಿರ ಕೋಟಿ ರೂ. ಮೌಲ್ಯದ ಅರಣ್ಯ ಭೂಮಿ ಪಡೆಯಲು ಕಾನೂನು ಹೋರಾಟ ನಡೆದಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ವಿಶ್ವಜೀವ ವೈವಿಧ್ಯ ದಿನ ಕಾರ್ಯಕ್ರಮ ಉದ್ಘಾಟಿಸಿ, ''ಈ ಭೂಮಿಯನ್ನು ಮರಳಿ ಪಡೆದು ಹಸಿರು ಹೊದಿಕೆಯ ರಕ್ಷಣೆ ಜತೆಗೆ, ಅರಣ್ಯ ಸಂವರ್ಧನೆ ಮಾಡಲಾಗುವುದು,'' ಎಂದರು.

''ಬೆಂಗಳೂರಿನ ಹೆಸರಘಟ್ಟ ಕೆರೆಯ ಸುತ್ತ 5,678 ಎಕರೆಯನ್ನು ಗ್ರೇಟರ್ ಹೆಸರಘಟ್ಟ ಸಂರಕ್ಷಿತ ಹುಲ್ಲುಗಾವಲು, ಬೆಂಗಳೂರು ಉತ್ತರ ತಾಲೂಕಿನ ಮಾದಪ್ಪನಹಳ್ಳಿಯ 153 ಎಕರೆ ಯನ್ನು ಬಸವಣ್ಣ ಜೈವಿಕ ಉದ್ಯಾನ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ,'' ಎಂದರು.

ಆನೆ ಕಾರಿಡಾರ್, ಹುಲಿ ಕಾರಿಡಾರ್ ಮರು ಸ್ಥಾಪನೆ: ''ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಳಕ್ಕೆ ಆನೆಗಳ ಕಾರಿಡಾರ್ ವಿಭಜನೆ, ಹುಲಿಗಳ ಪಥದಲ್ಲಿನ ಬದಲಾವಣೆ, ಹೆಚ್ಚುತ್ತಿರುವ ವನ್ಯ ಮೃಗಗಳ ಸಂಖ್ಯೆ ಹಾಗೂ ಕ್ಷೀಣಿಸುತ್ತಿರುವ ಅರಣ್ಯವೇ ಕಾರಣ. ಹೀಗಾಗಿ, ಅರಣ್ಯ ಒತ್ತುವರಿ ತೆರವಿಗೆ ಕಠಿಣ ಕ್ರಮ ಕೈಗೊಳ್ಳಲಾಗಿದೆ. ವಿಭಜನೆಯಾಗಿರುವ ಕಡೆಯಲ್ಲಿ ಕಾರಿಡಾರ್ ಮರು ಸ್ಥಾಪನೆಗೆ ಸೂಚಿಸಲಾಗಿದೆ,'' ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜೀವವೈವಿಧ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ವಾರ್ಷಿಕ ಪ್ರಶಸ್ತಿ ಮತ್ತು ಪ್ರಬಂಧ, ಚಿತ್ರಕಲೆ ಸೇರಿದಂತೆ ವಿವಿಧ ಸ್ಪರ್ಧೆಗಳ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜೀವವೈವಿಧ್ಯ ಮಂಡಳಿಯ ಅಧ್ಯಕ್ಷ ವಡ್ನಾಳ್ ಜಗದೀಶ್, ಪಶ್ಚಿಮಘಟ್ಟ ಕಾರ್ಯಪಡೆಯ ಅಧ್ಯಕ್ಷ ಮೊಹಮದ್ ತಬ್ರೇಜ್ ಷರೀಫ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್, ಇಲಾಖೆ ಪ್ರಧಾನ ಕಾರ್ಯದರ್ಶಿ ಮನೋಜ್ ಕುಮಾರ್ ಉಪಸ್ಥಿತರಿದ್ದರು.

ತುಡುವೆ ಜೇನು ಇನ್ಮೇಲೆ ರಾಜ್ಯ ಕೀಟ

''ತುಡುವೆ ಜೇನು (Apis cerana) ಮತ್ತು ಮಲೆನಾಡಿನ ಮರಗಂತಿ ಕಪ್ಪೆ(Malabar Tree Toad) ಅನ್ನು ಅನುಕ್ರಮವಾಗಿ 'ರಾಜ್ಯ ಕೀಟ' ಮತ್ತು 'ರಾಜ್ಯ ಉಭಯಜೀವಿ'ಯೆಂದು ಅಧಿಕೃತವಾಗಿ ಘೋಷಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈಗಾಗಲೇ ರಾಜ್ಯ ಸರಕಾರ ಕೂಡ ಶ್ರೀಗಂಧವನ್ನು ರಾಜ್ಯ ವೃಕ್ಷ, ಆನೆಯನ್ನು ರಾಜ್ಯ ಪ್ರಾಣಿ ಹಾಗೂ ನೀಲಕಂಠ ಪಕ್ಷಿಯನ್ನು ರಾಜ್ಯ ಪಕ್ಷಿ ಎಂದು ಘೋಷಿಸಿದೆ. ಇದರ ಜತೆಗೆ ಹಳದಿ ಕೆಂಪು ಬಣ್ಣದ ರೆಕ್ಕೆಯ ದೊಡ್ಡ ಚಿಟ್ಟೆಯನ್ನು (Southern Birdwing & Troides minos) ರಾಜ್ಯ ಚಿಟ್ಟೆ ಎಂದು ಘೋಷಿಸಲಾಗಿದೆ,'' ಎಂದು ಈಶ್ವರ ಖಂಡ್ರೆ ತಿಳಿಸಿದರು.